ಸಂಪುಟ : 8 ಸಂಚಿಕೆ : 234 ಪುಟ : 4 ಬೆಲೆ : 3.00 ರವಿವಾರ ಅಕ್ಟೋಬರ್ 22, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 234 Pages : 4 Price : 3.00 Sunday October 22, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

### ಥರ್ಡ್ ಐ, ಮಾದಕ ವ್ಯಸನ ಮುಕ್ತ ಗದಗ ಜಿಲ್ಲೆ ಜಾಗೃತಿ ಅಭಿಯಾನಕ್ಕೆ ಸಚಿವ ಎಚ್.ಕೆ ಪಾಟೀಲ ಚಾಲನೆ

# ಮಾದಕ ವ್ಯಸನ ಮುಕ್ತ ಸಮಾಜ ನಮ್ಮೆಲ್ಲರ ಜವಾಬ್ದಾರಿ

■ವಿಜಯಸಾಕ್ಷಿ ಸುದ್ದಿ, ಗದಗ

ಥರ್ಡ್ ಐ ಮುಖಾಂತರ ಸಮಾಜದ ಬದುಕಿನಲ್ಲಿ ಬಹು ದೊಡ್ಡ ಸುಧಾರಣೆ ಕಾಣಬಹುದಾಗಿದೆ. ಜಿಲ್ಲೆಯಲ್ಲಿ ಕಳುವು, ಕಾನೂನು ಬಾಹಿರ ಚಟುವಟಿಕೆಗಳನ್ನು ಕಂಡುಹಿಡಿದು ನಿಯಂತ್ರಿಸಲು ಥರ್ಡ್ ಐ ಸಹಕಾರಿಯಾಗಲಿದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳು ಮಾದಕ ವಸ್ತುಗಳ ಸೇವನೆಗೆ ದಾಸರಾಗುತ್ತಿದ್ದು, ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಪೊಲೀಸರೊಂದಿಗೆ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ. ಜನತೆ ಗದಗ ಜಿಲ್ಲೆಯನ್ನು ವ್ಯಸನ ಮುಕ್ತ ಜಿಲ್ಲೆಯಾಗಿಸುವ ಪಣ ತೊಡಬೇಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ನುಡಿದರು.

ಗದಗ ಜಿಲ್ಲಾ ಪೊಲೀಸ್ ಇಲಾಖೆಯಿಂದ ಆಯೋಜಿಸಿದ್ದ ಥರ್ಡ್ ಐ ಮತ್ತು ಮಾದಕ ವ್ಯಸನ ಮುಕ್ತ ಗದಗ ಜಿಲ್ಲೆ ಜಾಗೃತಿ ಅಭಿಯಾನಕ್ಕೆ ನಗರದ ಗಾಂಧೀ ವೃತ್ತದಲ್ಲಿ ಶನಿವಾರ ಚಾಲನೆ ನೀಡಿ ಅವರು ಮಾತನಾದರು.

ಕಾನೂನು ಪಾಲಿಸುವ ಮೂಲಕ ಸುರಕ್ಷಿತ ಜೀವನ ಸಾಗಿಸಬೇಕು. ಈ ನಿಟ್ಟಿನಲ್ಲಿ ಪೊಲೀಸ್



ಇಲಾಖೆಯಿಂದ ಥರ್ಡ್ ಐ ಕಮಾಂಡ್ ಸೆಂಟರ್ ತೆರೆಯಲಾಗಿದೆ. ಉತ್ತಮ ಗುಣಮಟ್ಟದ ಸಿಸಿ ಟಿವಿ ಕ್ಯಾಮರಾಗಳನ್ನು

> ಯುವ ಸಮುದಾಯ ಆರೋಗ್ಯಯುತ ಸುಸ್ಥಿರ ಜೀವನ ಸಾಗಿಸಲು ಸಮಾಜದ ಸರ್ವರೂ ಈ ಮಾದಕ ದ್ರವ್ಯಗಳ ನಿಯಂತ್ರಣ ಹಾಗೂ ನಿರ್ಮೂಲನೆ ಮಾಡಲು ದೃಢ ನಿರ್ಧಾರ ಕೈಗೊಳ್ಳಬೇಕು. ಪ್ರತಿಯೊಬ್ಬರೂ ತಮ್ಮ ನೆರೆಹೊರೆಯುವರನ್ನು ವ್ಯಸನ ಮುಕ್ತ ಗೊಳಿಸಲು ಶ್ರಮಿಸಬೇಕು. ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣ ನಮ್ಮೆಲ್ಲರ ಜವಾಬ್ದಾರಿಯಾಗಿದೆ.
>
> – ಡಾ. ಎಚ್.ಕೆ ಪಾಟೀಲ.

ಗದಗ ನಗರದ ಪ್ರಮುಖ ರಸ್ತೆ, ವೃತ್ತ, ಸಂಚಾರದಟ್ಟಣೆ ಇರುವೆಡೆ ಅಳವಡಿಸಲಾಗಿದೆ. ಅವುಗಳ ಸಹಾಯದಿಂದ ಸಂಚಾರಿ ನಿಯಮ ಉಲ್ಲಂಘಿಸುವವರನ್ನು ಶಿಕ್ಷೆಗೆ ಒಳಪಡಿಸಲಾಗುವುದು.

ಅಲ್ಲದೇ ಈ ಸಿಸಿ ಟಿವಿ ಅಳವಡಿಕೆಯಿಂದ ಅಪರಾಧಗಳನ್ನು ನಿಯಂತ್ರಿಸಲು ಸಹಕಾರಿಯಾಗಿದೆ. ಸಾರ್ವಜನಿಕರು ದೈನಂದಿನ ಜೀವನದಲ್ಲಿ ಸಂಚಾರಿ ನಿಯಮಗಳನ್ನು ಪಾಲಿಸುವ ಅಭ್ಯಾಸವನ್ನು ಮಾಡಿಕೊಳ್ಳುವ ಮೂಲಕ ಅಪಘಾತಗಳನ್ನು ತಡೆಗಟ್ಟಬೇಕು

> ಥರ್ಡ್ ಐ ಹಾಗೂ ಮಾದಕ ವ್ಯಸನ ಮುಕ್ತ ಗದಗ ಜಿಲ್ಲೆ ಜಾಗೃತಿ ಅಭಿಯಾನದ ಜಾಥಾವು ಗಾಂಧೀ ವೃತ್ತದಿಂದ ಆರಂಭವಾಗಿ ಟಾಂಗಾ ಸರ್ಕಲ್ ಮೂಲಕ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಹುಬ್ಬಳ್ಳಿ ರಸ್ತೆಯಲ್ಲಿರುವ ಭೀಮಸೇನ್ ಜೋಶಿ ಜಿಲ್ಲಾ ರಂಗ ಮಂದಿರ ತಲುಪಿತು.

ಎಂದು ಅವರು ಹೇಳಿದರು.

ಜಾಥಾ ಕಾರ್ಯಕ್ರಮದಲ್ಲಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ವಿಧಾನ ಪರಿಷತ್ ಸದಸ್ಯ ಎಸ್.ವಿ ಸಂಕನೂರ, ಗದಗ–ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಗಣ್ಯರಾದ ಬಿ.ಬಿ ಅಸೂಟಿ, ಚಂದಾವರಿ, ಪರಾಪೂರ, ಬರ್ಕತ ಅಲಿ ಮುಲ್ಲಾ, ವಾಸಣ್ಣ ಕುರಡಗಿ, ಸಿದ್ಧಣ್ಣ ಪಾಟೀಲ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಸೇರಿದಂತೆ ಶಾಲಾ ಮಕ್ಕಳು, ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಮಾಜಿ ಸೈನಿಕರ ಸಂಘದ ಪದಾಧಿಕಾರಿಗಳು ಹಾಜರಿದ್ದರು.

### ಹಾಯಿದೋಣಿ ಜಲಕ್ರೀಡಾ ತರಬೇತಿ ಶಿಬಿರಕ್ಕೆ ಸಚಿವ ಎಚ್.ಕೆ ಪಾಟೀಲ ಚಾಲನೆ

# ಯುವ ಸಮುದಾಯ ಒಲಂಪಿಕ್‌ನಲ್ಲಿ ಪಾಲ್ಗೊಳ್ಳಲು ಸಹಕಾರಿ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಭೀಷ್ಮ ಕೆರೆ ಆವರಣದಲ್ಲಿ ಅಕ್ಟೋಬರ್ 21ರಿಂದ ನವೆಂಬರ್ 5ರವರೆಗೆ ಏಳು ವರ್ಷ ಮೇಲ್ಪಟ್ಟ ಮಕ್ಕಳು, ಯುವಕರು ಹಾಗೂ ವಯಸ್ಕರಿಗಾಗಿ ಏರ್ಪಡಿಸಿರುವ ಹಾಯಿದೋಣಿ ಜಲಕ್ರೀಡಾ ತರಬೇತಿ ಶಿಬಿರಕ್ಕೆ ಶನಿವಾರ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಅವರು ಚಾಲನೆ ನೀಡಿದರು.

ಪ್ರವಾಸೋದ್ಯಮ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಸ್ಪೋರ್ಟ್ಸ್ ಅಸೋಸಿಯೇಷನ್




> ಈ ಸಂದರ್ಭದಲ್ಲಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ, ಗಣ್ಯರಾದ ಸಿದ್ದು ಪಾಟೀಲ, ವಾಸಣ್ಣ ಕುರಡಗಿ, ಪ್ರಭು ಬುರಬುರೆ, ಬಿ.ಬಿ ಅಸೂಟಿ, ಫಾರೂಕ, ಅಶೋಕ ಮಂದಾಲಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು, ಸಾರ್ವಜನಿಕರು ಹಾಜರಿದ್ದರು.

ಸಹಯೋಗದಲ್ಲಿ ಈ ಹಾಯಿದೋಣಿ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಅಕ್ಟೋಬರ್ 22ರಿಂದ 26ರವರೆಗೆ ಮೊದಲ ಹಂತದ ತರಬೇತಿ, ಅಕ್ಟೋಬರ್ 27ರಿಂದ 31ರವರೆಗೆ ಎರಡನೇ ಹಂತದ ತರಬೇತಿ, ನವೆಂಬರ್ 1ರಿಂದ ನವೆಂಬರ್ 5ರವರೆಗೆ ಮೂರನೇ ಹಂತದ ತರಬೇತಿ ಬ್ಯಾಚ್‌ಗಳು ನಡೆಯಲಿವೆ.

▶▶ 3ನೇ ಪುಟಕ್ಕೆ

## ಗದಗ–ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 22 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 31,32 ಭಜಂತ್ರಿ ಓಣಿ, ಸಿಕ್ಕಲಗಾರ ಓಣಿ, ರಂಗನವಾಡ, ಲಕ್ಷ್ಮೀ ಗುಡಿ, ದಾಸರ ಓಣಿ, ಸುಣಗಾರ ಓಣಿ, ತ್ರಿಕೋಟೇಶ್ವರ ರೋಡ್, ಪೊಲೀಸ್ ಕ್ವಾರ್ಟರ್ಸ್, ಮುಳಗುಂದ ನಾಕಾ, ಗುಜ್ಜರ ಬಸ್ತಿ, ಹಳೆ ಕಚೇರಿ, ಝುಂಡಾ ಕಟ್ಟಿ, ಜೋಡ ಮಾರುತಿ ಗುಡಿ, ಬ್ಯಾಂಕ್ ಲೈನ್, ಬನ್ನಿ ಮಹಾಕಾಳಿ ಗುಡಿ ಲೈನ್, ಮುಳುಗುಂದ ನಾಕಾ ರೋಡ್,ವಾರ್ಡ್ ನಂ. 21,22 ವಿಜಯನಗರ ಸ್ಕೂಲ್ ನ ಭಾಗ, ವಾಲ್ಮೀಕಿ ಭವನ, ಕರುಗಲ್ ಲೇಔಟ್, ಶಿಗ್ಗಾವಿ ಅವರ ಲೈನ್, ಕಾಮತರ ಪ್ಲಾಟ್, ಟವರ್ ಕಂಬ ಲೈನ್ ಕೆಲವು ಉಳಿದ ಭಾಗಗಳು. ವಾರ್ಡ್ ನಂ. 29 ರಾಜೀವಗಾಂಧಿ ನಗರ ಗುಂಪಿನ ಮನೆ, ಬಾಂಡಗೆ ಲೈನ್, ಚೆಂದಾವರಿಯವರ ಲೈನ್, ಡಂಬಳ ಲೈನ್, ಪೊಲೀಸ್ ಸ್ಟೇಷನ್ ಲೈನ್, ಕೆಳಗಿನ ಭಾಗ– ಮೇಲಿನ ಭಾಗ, ಸುಡಗಾರ ಸಿದ್ದರ ಓಣಿ, ಕಲಾಮಂದಿರ ರೋಡ್, ಮಸೂತಿ ಲೈನ್,

ವಾರ್ಡ್ ನಂ 2 ಸೆಟ್ಲಮೆಂಟ್ ಸ್ಲಾಬ್ ಮನೆ, ವೆಲ್ಫೇರ್, ಕುಷ್ಟಗಿ ಚಾಳ, ಗಾಂಧಿ ರೋಡ್, ಸಬ್ ಜೈಲ್ ರೋಡ್, ಕಾಲಮೇಂಟ್ ರೋಡ್, ಹರಣ ಶಿಕಾರಿ ಓಣಿ, ಹನುಮಂತ ದೇವರ ಗುಡಿ ಲೈನ್, ಎಡಭಾಗ– ಬಲಭಾಗ, ಸಿಂದಗಿಯವರ ಲೈನ್,

ವಾರ್ಡ್ ನಂ. 35 9ನಂಬರ್ ಸ್ಕೂಲ್ ಲೈನ್, ಆದರ್ಶ ನಗರ, ನೀಲಮ್ಮ ತಾಯಿ ಮಠ, ದೇವರಾಜ ಅರಸು, ಬಾಲಾಜಿನಗರ ಪತ್ತಾರ್ ಸರ್ ಲೈನ್, ವಾರ್ಡ್ ನಂ.15,16,17 ಶಹಪುರ್ ಪೇಟ, ಜವಳಗಲ್ಲಿ, ಡಿಸಿ ಮಿಲ್ ರೋಡ್, ಮೀನದ ಮಾರ್ಕೆಟ್, ಗಣಪತಿ ಗುಡಿ, ಶರಣಬಸವೇಶ್ವರ ಗುಡಿ, ಕಟ್ಟಿ ಬಸವೇಶ್ವರ ಗುಡಿ, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್, ಕರ್ನಾಟಕ ಟಾಕೀಸ್ ಲೈನ್, ಕಾಡಪ್ಪನವರ ಲೈನ್, ಪರಾಪುರ್ ಬಿಲ್ಡಿಂಗ್, ವಾರ್ಡ್ ನಂ. 5,6 ಸರ್ವಿಯರ ಲೈನ್, ಖಾನಾಪೂರ ಲೈನ್ ,ಚೆನ್ನಪ್ಪ ಗೌಡ್ರು ಲೈನ್, ಹಳ್ಳಿಕೇರಿ ಪ್ಲಾಟ್, ಗಣೇಶನಗರ ಭಾಗ 4, ಶಿವ ನಾಗ ನಗರ ಭಾಗ 4 ಕೆಲವು ಉಳಿದ ಭಾಗಗಳು.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸ ಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಆಯ್ಕೆಯಾದ ನೂತನ ಶಿಕ್ಷಕರಿಗೆ ನೇಮಕಾತಿ ಆದೇಶ ವಿತರಿಸಿದ ಸಚಿವ ಎಚ್.ಕೆ.ಪಾಟೀಲ

# ಶಿಕ್ಷಕರು ಭವಿಷ್ಯದ ಪ್ರಜೆಗಳ ಆಶಾಕಿರಣ



■ವಿಜಯಸಾಕ್ಷಿ ಸುದ್ದಿ, ಗದಗ

ಶಿಕ್ಷಕ ಸಮುದಾಯವು ಸಮಾಜದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಲಿದೆ. ಶಿಕ್ಷಕರಾದವರು ಭವಿಷ್ಯದ ಪ್ರಜೆಗಳ ಆಶಾಕಿರಣವಾಗಿ ಕಾರ್ಯನಿರ್ವಹಿಸಬೇಕು. ಶಿಕ್ಷಕ ವೃತ್ತಿ ಅತ್ಯಂತ ಗೌರವಯುತ ವೃತ್ತಿಯಾಗಿದ್ದು, ಶಿಕ್ಷಕರ ನಡತೆಯನ್ನು ವಿದ್ಯಾರ್ಥಿಗಳು ಅನುಸರಿಸುತ್ತಾರೆ. ಆದುದರಿಂದ ಶಿಕ್ಷಕರು ಮಕ್ಕಳಿಗೆ ಮಾರ್ಗದರ್ಶಕರಾಗಿ ಜೀವನ ರೂಪಿಸಿಕೊಳ್ಳಲು ತಮ್ಮದೇ ಆದ ಕೊಡುಗೆಯನ್ನು ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ.ಪಾಟೀಲ ಹೇಳಿದರು.

ಅವರು, ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆಯು ನಡೆಸಿದ ಪದವೀಧರ ಪ್ರಾಥಮಿಕ ಶಿಕ್ಷಕರ ಪರೀಕ್ಷೆಯಲ್ಲಿ ಆಯ್ಕೆಯಾಗಿ ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡ ನೂತನ ಶಿಕ್ಷಕರಿಗೆ ಶನಿವಾರ ನಗರದ ಕಳಸಾಪುರ ರಸ್ತೆಯಲ್ಲಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಯಲ್ಲಿ ನೇಮಕಾತಿ ಆದೇಶ ಪ್ರತಿ ವಿತರಿಸಿ ಮಾತನಾಡಿದರು.

ಗದಗ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆ ನೀಗಿಸುವ ನಿಟ್ಟಿನಲ್ಲಿ ನೂತನವಾಗಿ ಆಯ್ಕೆಯಾದ ಶಿಕ್ಷಕರು ಕಾರ್ಯನಿರ್ವಹಿಸಬೇಕು. ನಿಮ್ಮಿಂದ ಸಮಾಜದ ಸುಧಾರಣೆಯೊಂದಿಗೆ ಸುರಕ್ಷತೆಯಡೆಗೆ ಸಾಗುವ ಜವಾಬ್ದಾರಿ ವಹಿಸಲಾಗಿದೆ. ಯುವ ಶಿಕ್ಷಕರಾದ ತಾವುಗಳು ತಮ್ಮ ವೃತ್ತಿಯಲ್ಲಿ ದಕ್ಷತೆ, ಪ್ರಾಮಾಣಿಕತೆ , ಅಳವಡಿಸಿಕೊಳ್ಳಬೇಕು ಎಂದು ಸಚಿವ ಎಚ್.ಕೆ.ಪಾಟೀಲ ಸಲಹೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಮಾತನಾಡಿ, ಸಮಾಜ ಉತ್ತಮ ದಿಕ್ಕಿನಡೆಗೆ ಚಲಿಸುವ ಗುರುತರ ಜವಾಬ್ದಾರಿ ಶಿಕ್ಷಕ ವರ್ಗ ನಿಭಾಯಿಸಬೇಕಿದೆ. ನಿಮ್ಮಿಂದ ವಿದ್ಯಾರ್ಥಿಗಳ ಭದ್ರ ಭವಿಷ್ಯ ಅನಾವರಣಗೊಳ್ಳಬೇಕು. ಆಯ್ಕೆಯಾದ ಶಿಕ್ಷಕರೆಲ್ಲರೂ ತಮ್ಮದೇ ಆದ ಕೊಡುಗೆಯನ್ನು ಸಮಾಜಕ್ಕೆ ಸಲ್ಲಿಸಬೇಕೆಂದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ, ಡಯಟ್‌ದ ಪ್ರಾಚಾರ್ಯ ಜಿ.ಎಲ್. ಬಾರಾಟಕ್ಕೆ, ಗಣ್ಯರಾದ ಬಿ.ಬಿ.ಅಸೂಟಿ, ಸಿದ್ದು ಪಾಟೀಲ, ಶಿಕ್ಷಣ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು ಹಾಜರಿದ್ದರು.

### 'ಕರ್ನಾಟಕ ನಾಮಕರಣಕ್ಕೆ 50ರ ಸಂಭ್ರಮ' ಪೂರ್ವಭಾವಿ ಸಭೆಯಲ್ಲಿ ಸಚಿವ ಡಾ.ಎಚ್.ಕೆ ಪಾಟೀಲ

# ಸಮಾರಂಭವನ್ನು ವಿಶಿಷ್ಟ ರೀತಿಯಲ್ಲಿ ಸಂಭ್ರಮಿಸೋಣ



■ವಿಜಯಸಾಕ್ಷಿ ಸುದ್ದಿ, ಗದಗ

ಮೈಸೂರು ರಾಜ್ಯಕ್ಕೆ 1973ರಲ್ಲಿ ಕರ್ನಾಟಕ ಎಂದು ಮರುನಾಮಕರಣವಾಯಿತು. ಮರುನಾಮಕರಣವಾದ ಹಿನ್ನೆಲೆಯಲ್ಲಿ 50ರ ಸಂಭ್ರಮಾಚರಣೆಯನ್ನು ನವೆಂಬರ್ 2ರಿಂದ ವರ್ಷಪೂರ್ತಿ ಆಚರಿಸಲಾಗುವುದು. ಗದಗನಲ್ಲಿ ನ.3ರಂದು ಜರುಗುವ 'ಕರ್ನಾಟಕ ನಾಮಕರಣಕ್ಕೆ 50ರ ಸಂಭ್ರಮ' ಸಮಾರಂಭವು ಗದಗ ಜನತೆಗೆ ಭಾವನಾತ್ಮಕ, ಸಾಂಸ್ಕೃತಿಕ, ಅವಿಸ್ಮರಣೀಯ ಕಾರ್ಯಕ್ರಮವಾಗಿ ಹೊರಹೊಮ್ಮಲಿ ಎಂದು ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ ಭವನದ ಕೋರ್ಟ್ ಸಭಾಂಗಣದಲ್ಲಿ ಶನಿವಾರ ಜರುಗಿದ 'ಕರ್ನಾಟಕ ನಾಮಕರಣಕ್ಕೆ 50ರ ಸಂಭ್ರಮ' ಸಮಾರಂಭದ ಯಶಸ್ಸಿಗೆ

> ಕರ್ನಾಟಕ ನಾಮಕರಣ ಹಾಗೂ ಏಕೀಕರಣದಲ್ಲಿ ಗದಗ ಜಿಲ್ಲೆಯ ಮಹನೀಯರ ಪಾತ್ರ ಮಹತ್ತರವಾಗಿತ್ತು. ಕರ್ನಾಟಕ ನಾಮಕರಣದ ಕುರಿತು ನಿರ್ಣಯ ಗದಗ ಜಿಲ್ಲೆಯಿಂದ ಮಾಡುವ ಮೂಲಕ ಅವಿಸ್ಮರಣೀಯ ಐತಿಹಾಸಿಕ ಮುನ್ನುಡಿ ಬರೆಯಲಾಗಿತ್ತು. ಅಂದು ಗದಗನಲ್ಲಿ ನಡೆದ ಸಮ್ಮೇಳನದಲ್ಲಿ ಮೈಸೂರು ಮಹಾರಾಜರು, ಮುಖ್ಯಮಂತ್ರಿ ಡಿ.ದೇವರಾಜ ಅರಸು ಹಾಗೂ ಸಚಿವರಾದ ಕೆ.ಎಚ್ ಪಾಟೀಲ ಅವರ ನೇತೃತ್ವದಲ್ಲಿ ಸಮ್ಮೇಳನ ಅತ್ಯಂತ ಅಚ್ಚುಕಟ್ಟಾಗಿ ನೆರವೇರಿತು. ಇದೇ ನ.3ರಂದು ನಡೆಯುವ ಸಮಾರಂಭವನ್ನು ಅತ್ಯಂತ ಶಿಸ್ತುಬದ್ಧವಾಗಿ, ವಿಶಿಷ್ಟ ರೀತಿಯಲ್ಲಿ ಸಂಭ್ರಮಿಸೋಣ.
>
> – ಎಚ್.ಕೆ ಪಾಟೀಲ.
> ಗದಗ ಜಿಲ್ಲಾ ಉಸ್ತುವಾರಿ ಸಚಿವರು.

ಕರೆಯಲಾದ ಜಿಲ್ಲಾ ಮಟ್ಟದ ಅಧಿಕಾರಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬೆಳಿಗ್ಗೆ ನಗರದ ವೀರನಾರಾಯಣ ದೇವಸ್ಥಾನ ಆವರಣದಿಂದ ವಿವಿಧ ಕಲಾ ತಂಡಗಳು ಹಾಗೂ ಸ್ತಬ್ಧ ಭಾವಚಿತ್ರಗಳ ಮೆರವಣಿಗೆ ಆರಂಭವಾಗಲಿದೆ. ಮುಖ್ಯಮಂತ್ರಿ ಸಿದ್ಧರಾಮಯ್ಯನವರು 'ಕರ್ನಾಟಕ 50'ರ ಸಂಭ್ರಮದ ಜ್ಯೋತಿಯನ್ನು ಬರಮಾಡಿಕೊಂಡು ತಾಯಿ ಭುವನೇಶ್ವರಿ ಪ್ರತಿಮೆಗೆ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡುವರು.

▶▶ 3ನೇ ಪುಟಕ್ಕೆ



## ಸಾಕ್ಷಿ ಸುಭಾಷಿತ

ಭಾಗ್ಯವಿರಬಹುದು, ಬೇಕಾದವರು ಇರಬಹುದು,
ಫಲ ಮಾತ್ರ ಪಡೆದಷ್ಟೇ
-ಎ. ಆರ್. ಕೃಷ್ಣಶಾಸ್ತ್ರಿ

## ಸಂಪಾದಕೀಯ

### ಕಾಂಗ್ರೆಸ್‌ನಲ್ಲಿ ಪ್ರಭಾವ ಮತ್ತು ಅಧಿಕಾರ ರಾಜಕಾರಣ

ರಾಜ್ಯ ಕಾಂಗ್ರೆಸ್ ಪಾಳಯದಲ್ಲಿ ಮತ್ತೊಮ್ಮೆ ಅಸಮಾಧಾನ ಭುಗಿಲೆದ್ದಿದೆ. ಸರಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಒಂದಿಲ್ಲೊಂದು ಆಂತರಿಕ ಸಂಕಷ್ಟ ಎದುರಿಸಿಕೊಂಡು ಮುನ್ನಡೆಯುತ್ತಿರುವ ಸರಕಾರಕ್ಕೆ ಸದ್ಯ ಒಂದಲ್ಲ ಎರಡು ಸಮಸ್ಯೆ ಎದುರಾಗಲಿದೆ.

ಸದ್ಯ ಬೆಳಗಾವಿ ರಾಜಕಾರಣ ವಿಷಯವಾಗಿ ಸತೀಶ ಜಾರಕಿಹೊಳಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಕಾಂಗ್ರೆಸ್ ವಲಯದ ಅಸಮಾಧಾನಕ್ಕೆ ಕಾರಣವಾಗಿದೆ. ಅದರಲ್ಲೂ ಡಿಸಿಎಂ ಮತ್ತು ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ ವಿರುದ್ಧ ಸತೀಶ ಜಾರಕಿಹೊಳಿ ತಿರುಗಿಬಿದ್ದಿರುವುದು ಕಾಂಗ್ರೆಸ್ ವಲಯದಲ್ಲಿ ಸಂಚಲನ ಸೃಷ್ಟಿಸಿದೆ.

ಒಂದು ಕಾಲದಲ್ಲಿ ಸಿದ್ದರಾಮಯ್ಯ ಮತ್ತು ಸತೀಶ ಜಾರಕಿಹೊಳಿ ಆಪ್ತರಾಗಿದ್ದರು. ಯಾವಾಗ ಸತೀಶ ಜಾರಕಿಹೊಳಿಗೆ ಮಂತ್ರಿ ಸ್ಥಾನದಿಂದ ಕೈಬಿಟ್ಟು ರಮೇಶ ಜಾರಕಿಹೊಳಿಗೆ ಮಂತ್ರಿ ಮಾಡಿದರೋ ಅಲ್ಲಿಂದ ಇಬ್ಬರ ಮಧ್ಯೆ ಸಂಬಂಧ ಅಷ್ಟಕ್ಕಷ್ಟೆ ಎನ್ನುವಂತಾಗಿತ್ತು. ಮುಂದೆ ರಮೇಶ ಜಾರಕಿಹೊಳಿ ಬಿಜೆಪಿ ಸೇರಿದರೂ ಸತೀಶ ಮತ್ತು ಸಿದ್ದರಾಮಯ್ಯ ಮಧ್ಯೆ ಸಂಬಂಧ ಮಾತ್ರ ಸುಧಾರಿಸಲಿಲ್ಲ.

ಆ ಕಾರಣಕ್ಕಾಗಿಯೇ ಇವತ್ತು ಸಿದ್ದರಾಮಯ್ಯ ಅವರು ಸತೀಶ ಜಾರಕಿಹೊಳಿ ಮನವೊಲಿಕೆಗೆ ಮುಂದಾಗುತ್ತಿಲ್ಲ. ಅಷ್ಟಕ್ಕೂ ಸತೀಶ ಜಾರಕಿಹೊಳಿ ಡಿ.ಕೆ. ಶಿವಕುಮಾರ ವಿರುದ್ಧ ಗುಡುಗುತ್ತಿರುವುದರಿಂದ ಸಿದ್ದರಾಮಯ್ಯ ಕಾದು ನೋಡುವ ತಂತ್ರ ಅನುಸರಿಸುತ್ತಿರಬಹುದು. ಒಟ್ಟಾರೆ ಈ ಹಿಂದೆ ತತಕ್ಷಣಕ್ಕೆ ಡ್ಯಾಮೇಜ್ ಕಂಟ್ರೋಲ್ ಮಾಡಲು ಮಾತ್ರ ಮುಂದಾಗದಿರುವುದು ಗಾಯ ಮತ್ತಷ್ಟು ದೊಡ್ಡದಾಗುವ ಲಕ್ಷಣಗಳಿವೆ.

ಜಿಲ್ಲೆಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದೇ ಬೆಳಗಾವಿ ರಾಜಕಾರಣದ ವಿಶೇಷತೆ. ಬೆಳಗಾವಿ ರಾಜಕಾರಣದಿಂದ ಸತೀಶ ಜಾರಕಿಹೊಳಿ ಅವರನ್ನು ದೂರ ಮಾಡಲಾಗುತ್ತಿದೆ ಎನ್ನುವ ಕಾರಣಕ್ಕೆ ಸತೀಶ ಜಾರಕಿಹೊಳಿ ಅಸಮಾಧಾನಕ್ಕೆ ಕಾರಣವಾಗಿದೆ. ಕಳೆದೊಂದು ವಾರದಿಂದ ರಾಜ್ಯ ರಾಜಕಾರಣದಲ್ಲಿ ಜಾರಕಿಹೊಳಿ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ.

ಇನ್ನೊಂದೆಡೆ ಸರಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ನೀಡಿರುವ ಹೇಳಿಕೆ ಕಾಂಗ್ರೆಸ್ಸಿನಲ್ಲಿ ಮತ್ತೊಂದು ಬಿರುಗಾಳಿ ಸೃಷ್ಟಿಗೆ ಕಾರಣವಾಗಿದೆ. ಎರಡೂವರೆ ವರ್ಷದ ನಂತರ ರಾಜ್ಯ ಸಚಿವ ಸಂಪುಟ ಪುನರ್ ರಚನೆಯಾಗಲಿದೆ. ಈ ಬಗ್ಗೆ ಸುರ್ಜೇವಾಲಾ ಅವರೇ ಭರವಸೆ ಕೊಟ್ಟಿದ್ದಾರೆ. ಕಾಂಗ್ರೆಸ್‌ನಲ್ಲಿ ಹಿರಿಯರು ಕಿರಿಯರು ಎನ್ನುವ ಭೇದ ಇಲ್ಲ. ಅದೃಷ್ಟವಂತರು ಮಂತ್ರಿಗಳಾಗುತ್ತಾರೆ. ಅದೃಷ್ಟ ಇಲ್ಲದವರಿಗೆ ಇಲ್ಲ ಎನ್ನುವ ಹೇಳಿಕೆ ಸಂಚಲನ ಸೃಷ್ಟಿಸಿದೆ.

ಒಂದೆಡೆ ಜಾರಕಿಹೊಳಿ ಅಸಮಾಧಾನ ತಣಿಸುವ ಹೊಣೆ ಎದುರಾದರೆ ಮತ್ತೊಂದೆಡೆ ಅಶೋಕ ಪಟ್ಟಣ ಹೇಳಿಕೆಯಿಂದ ಆಕ್ರೋಶಗೊಳ್ಳುವ ಸಚಿವರನ್ನು ಸಮಾಧಾನ ಮಾಡಬೇಕಾದ ಸಂಕಷ್ಟಕ್ಕೆ ಕಾಂಗ್ರೆಸ್ ಸಿಲುಕಿದೆ. ಇಂಥ ಸಮಸ್ಯೆಯಿಂದ ಕಾಂಗ್ರೆಸ್ ಹೊರಬರದಿದ್ದರೆ ಸಂಕಷ್ಟ ಎದುರಿಸಬೇಕಾಗುತ್ತದೆ.

## ಬಸವದಳದ 'ಶರಣ ಸಂಗಮ' ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಅ.22, ರವಿವಾರ ಬೆಳಿಗ್ಗೆ 11ಕ್ಕೆ ಶರಣ ಸಿದ್ಧರಾಜ ಎಸ್. ಅಂಗಡಿ 'ಭೂದೇವಿ ನಿಲಯ' ಪ್ಲಾಟ್ ನಂ. 6, ಸರಕಾರಿ ಪ್ರೌಢಶಾಲೆ ಹತ್ತಿರ, ರಾಜೀವ ಗಾಂಧಿ ನಗರ, ಗದಗ ಇಲ್ಲಿ ಬಸವದಳದ ಅಧ್ಯಕ್ಷ, ಶರಣ ವಿ.ಕೆ ಕರೇಗೌಡ್ರ ಇವರ ಅಧ್ಯಕ್ಷತೆಯಲ್ಲಿ ಬಸವದಳದ 1564ನೇ ಶರಣ ಸಂಗಮದಲ್ಲಿ 'ಗುರು ಪ್ರವೇಶ' ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

### ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ 6ನೇ ದಿನದ ಸಮಾರಂಭದಲ್ಲಿ ರಂಭಾಪುರಿ ಶ್ರೀಗಳು

# ಕಷ್ಟಗಳು ಹೆಚ್ಚಿದಷ್ಟು ಜೀವನ ಮೌಲ್ಯ ಹೆಚ್ಚುತ್ತದೆ

■ವಿಜಯಸಾಕ್ಷಿ ಸುದ್ದಿ, ಲಿಂಗಸುಗೂರು



ದುಡಿಮೆಯ ಬೆವರಿನಿಂದ ಗಳಿಸಿದ ಸಂಪತ್ತು ಶ್ರೇಷ್ಠ, ದುಡಿಯದೇ ಗಳಿಸಿದ ಸಂಪತ್ತು ಬಹಳ ಕಾಲ ಉಳಿಯಲಾರದು. ವೀರಶೈವ ಧರ್ಮ ಕಾಯಕ ಮತ್ತು ದಾಸೋಹಕ್ಕೆ ಮಹತ್ವ ಕೊಟ್ಟಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ 6ನೇ ದಿನದ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಬಿತ್ತಿದ ಬೀಜದಂತೆ ಫಸಲು ಹೇಗೋ ಹಾಗೆಯೇ ಆಚರಣೆಯಂತೆ ಫಲ ಪ್ರಾಪ್ತಿಯಾಗುತ್ತದೆ. ಬೆಟ್ಟಕ್ಕೆ ಬೆಟ್ಟದ ಅವಶ್ಯಕತೆ ಇಲ್ಲದೇ ಇರಬಹುದು. ಆದರೆ ಮನುಷ್ಯನಿಗೆ ಮನುಷ್ಯನ ಅವಶ್ಯಕತೆ ಇದ್ದೇ ಇದೆ. ಜೀವನದಲ್ಲಿ ಕಲಿಕೆ, ಗಳಿಕೆ ಮತ್ತು ಭಗವಂತನ ಚಿಂತನೆಯಲ್ಲಿ ಹೆಜ್ಜೆ ಹಾಕಬೇಕು. ಮೂಲ ನಂಬಿಕೆಗಳನ್ನು ಮೂಢ ನಂಬಿಕೆಗಳೆಂದು ತಿಳಿಯದೇ ಅದರಂತೆ ಅನುಸರಿಸಿ ಬಾಳಬೇಕು. ಕಾಯಿಸಿದ ಚಿನ್ನ ಒಡವೆಯಾಗುತ್ತದೆ. ಬಡಿದ ತಾಮ್ರ ತಂತಿಯಾಗುತ್ತದೆ. ಕೆತ್ತಿದ ಕಲ್ಲು ಮೂರ್ತಿಯಾಗುತ್ತದೆ. ಕಷ್ಟಗಳು ಹೆಚ್ಚಾದಷ್ಟು ಜೀವನ ಮೌಲ್ಯ ಹೆಚ್ಚುತ್ತದೆ. ದೇಹವನ್ನು ದುಡಿಮೆಗೆ ಮನಸ್ಸನ್ನು ಭಗವಂತನಿಗೆ ಅರ್ಪಿಸಿ ನಡೆದಾಗ ಜೀವನ ಸಾರ್ಥಕಗೊಳ್ಳುತ್ತದೆ ಎಂದರು.

ಲಿಂಗಸುಗೂರಿನ ಸಮಾಜದ ಹಿರಿಯ ಧುರೀಣರಾದ ಮಲ್ಲಣ್ಣ ವಾರದ ಇವರಿಗೆ 'ವೀರಶೈವ ಸಿರಿ' ಪ್ರಶಸ್ತಿಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಪ್ರದಾನ ಮಾಡಿದರು. ದೇವರಭೂಪುರ ಶ್ರೀಗಳು ಪ್ರಶಸ್ತಿ ವಾಚನ ಮಾಡಿದರು.

ಬಿಜೆಪಿ ಉಪಾಧ್ಯಕ್ಷ, ಶಾಸಕ ಬಿ.ವೈ ವಿಜಯೇಂದ್ರ ಮಾತನಾಡಿ, ಇದೊಂದು ಅದ್ಭುತ ಸಮಾರಂಭ. ಭೌತಿಕ ಬದುಕಿಗೆ ಆಧ್ಯಾತ್ಮ ಚಿಂತನೆಗಳು ಅವಶ್ಯಕತೆಯಿದೆ. ಸುಖ-ಶಾಂತಿಯ ಬದುಕಿಗೆ ಧರ್ಮವೊಂದೇ ಬೆಳಕು ತೋರಬಲ್ಲದು. ಪ್ರಾಚೀನ ಇತಿಹಾಸ ಪರಂಪರೆ ಹೊಂದಿದ ಶ್ರೀ ರಂಭಾಪುರಿ ಪೀಠದ ಡಾ.ವೀರಸೋಮೇಶ್ವರ ಜಗದ್ಗುರುಗಳು ಕೈಗೊಂಡಿರುವ ಧರ್ಮಯಜ್ಞ ಸಕಲರ ಬಾಳಿಗೆ ಬೆಳಕು ತೋರಲೆಂದರು.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ ಮಾತನಾಡಿ, ಪರಸ್ಪರ ಅರಿತು ಬಾಳುವುದರಲ್ಲಿ ಸಮುದಾಯದ ಶ್ರೇಯಸ್ಸು ಇದೆ. ಮೈಸೂರು ದಸರಾ ನೆನಪಿಸುವ ದಸರಾ ಲಿಂಗಸುಗೂರಿನಲ್ಲಿ ನಡೆಯುತ್ತಿದೆ. ಸರ್ವ ಜನಾಂಗದ ಪ್ರೀತಿಯನ್ನು ರಂಭಾಪುರಿ ಪೀಠ ಗಳಿಸಿದೆ. ಶ್ರೀ ಜಗದ್ಗುರುಗಳು ಕವಲು ದಾರಿಯಲ್ಲಿರುವ ಸಮಾಜವನ್ನು ಒಗ್ಗೂಡಿಸಬೇಕೆಂಬ ಮಹದಾಸೆಯಿಂದ ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗುತ್ತಿದ್ದಾರೆ. ಅವರ ಮಹತ್ಕಾರ್ಯಕ್ಕೆ ನಾವೆಲ್ಲರೂ ಕೈ ಜೋಡಿಸುತ್ತೇವೆ ಎಂದು ಬಿನ್ನವಿಸಿದರು.

ಮಾಜಿ ಸಚಿವ ಕಳಕಪ್ಪ ಬಂಡಿ ಮಾತನಾಡಿ 19ನೇ ದಸರಾದ ನೆನಪುಗಳನ್ನು ಹಂಚಿಕೊಂಡರು. ರಾಯಚೂರು ಶಾಸಕ ಡಾ.ಶಿವರಾಜ ಪಾಟೀಲ, ಶಾಸಕ ಮಾನಪ್ಪ ಡಿ.ವಜ್ಜಲ, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

> ಅಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ, ಸಾವಿನಿಂದ ಸಾವಿಲ್ಲದೆಡೆಗೆ ಸಾಗುವ ಗುರಿ ನಮ್ಮದಾಗಬೇಕು. ಮನುಷ್ಯ ಜೀವನದಲ್ಲಿ ದೇವರು, ಧರ್ಮ ಮತ್ತು ಗುರುವನ್ನು ಎಂದಿಗೂ ಮರೆಯಬಾರದು. ಪ್ರಾಪಂಚಿಕ ಸಂಬಂಧಗಳು ಕಾಲಾಂತರದಲ್ಲಿ ಹೆಚ್ಚು ಕಮ್ಮಿ ಆಗಬಹುದು. ಆದರೆ ಗುರು-ಶಿಷ್ಯರ ಸಂಬಂಧ ಯಾವಾಗಲೂ ಶಾಶ್ವತವಾಗಿರುತ್ತದೆ. ದೇಶ ಕಾಯುವ ಸೈನಿಕ, ಅನ್ನ ನೀಡುವ ರೈತ, ಉತ್ತಮ ಸಮಾಜ ನಿರ್ಮಾಣಕ್ಕೆ ಆದರ್ಶ ಸಂಸ್ಕೃತಿ ಇವುಗಳನ್ನು ಮರೆಯದೇ ಕಾಪಾಡಿಕೊಂಡು ಬರುವ ಜವಾಬ್ದಾರಿ ಎಲ್ಲರದಾಗಿದೆ.
> – ಡಾ. ವೀರಸೋಮೇಶ್ವರ ಜಗದ್ಗುರುಗಳು.
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

ಕವಲೇದುರ್ಗ ಭುವನಗಿರಿ ಸಂಸ್ಥಾನಮಠದ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು 'ಸಾವಯವ ಕೃಷಿಯ ಮಹತ್ವ' ಕುರಿತು ಸುದೀರ್ಘವಾಗಿ ಉಪನ್ಯಾಸ ನೀಡಿದರು. ಮಳಲಿ ಸಂಸ್ಥಾನಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀನಿವಾಸ ಸರಡಗಿ ಚಿಕ್ಕಮಠದ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿದ್ದರು. ದೇವರಭೂಪುರ ಬೃಹನ್ಮಠದ ಅಭಿನವ ಗಜದಂಡ ಶಿವಾಚಾರ್ಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳನ್ನು ಮೊದಲ್ಗೊಂಡು ಸಿದ್ಧರಬೆಟ್ಟ, ಸಂಗೊಳ್ಳಿ, ಮಮದಾಪುರ, ತಡವಲಗ, ಆಲಮೇಲ, ಯಂಕಂಚಿ, ರೌಡಕುಂದ, ಚಿಮ್ಮಲಗಿ, ಗುಂಡಕನಾಳ ಶ್ರೀಗಳು ವೇದಿಕೆಯ ಮೇಲೆ ಇದ್ದರು.

ಲಿಂಗಸುಗೂರಿನ ಉಪನ್ಯಾಸಕ ಮಂಜುನಾಥ ಕಾಮಿನ್ ಸ್ವಾಗತಿಸಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲದ ಸಾಧಕರಿಂದ ವೇದಘೋಷ, ವಿಶ್ವೇಶ್ವರಯ್ಯ ಹಿರೇಮಠ ಲಿಂಗಸುಗೂರು, ಮಲ್ಲಿಕಾರ್ಜುನ ಹೂಗಾರ ಗದಗ ಹಾಗೂ ಷಣ್ಮುಖಯ್ಯ ಹಿರೇಮಠ ಕಂಚಿನೆಗಳೂರು ಇವರಿಂದ ಭಕ್ತಿಗೀತೆ ಮತ್ತು ಶಿವಮೊಗ್ಗದ ಶಾಂತಾ ಆನಂದ ಹಾಗೂ ಮೈಸೂರಿನ ಸಿ.ಹೆಚ್ ರೇಣುಕಪ್ರಸಾದ್ ಇವರಿಂದ ನಿರೂಪಣೆ ನಡೆಯಿತು.



■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ನೂತನ ಲೋಕಾಯುಕ್ತ ಡಿಎಸ್‌ಪಿ ಆಗಿ ನೇಮಕವಾದ ವಿಜಯ ಬಿರಾದಾರ ಅವರಿಗೆ ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂ ಗದಗ ಜಿಲ್ಲೆ ವತಿಯಿಂದ ಸ್ವಾಗತ ಕೋರಿ ಅಭಿನಂದನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ವೆಂಕಟೇಶ ದ್ವಾಸಲಕೇರಿ, ಸದಸ್ಯರಾದ ಮಂಜುನಾಥ ಹಳ್ಳೂರಮಠ, ಜಗದೀಶ ಸಂಕನಗೌಡ್ರ, ಪರಶುರಾಮ ಶಿರೂರು, ಪ್ರಸಾದ್ ಕೊಡಿತ್ಕರ ಮುಂತಾದವರು ಹಾಜರಿದ್ದರು.

## 'ಲಿಂಗರಾಜ ನಗರ ದಸರಾ' ಇಂದಿನಿಂದ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ



ಇಲ್ಲಿನ ಲಿಂಗರಾಜ ನಗರದ ನಾಗರಿಕರೆಲ್ಲರೂ ಸೇರಿ ಇದೇ ಮೊದಲ ಬಾರಿಗೆ ಬಡಾವಣೆ ಮಟ್ಟದ ದಸರಾ ಆಚರಣೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಶ್ರೀ ಕಟ್ಟಿ ಮಂಗಳಾದೇವಿ ದೇವಸ್ಥಾನ ಹಾಗೂ ಶ್ರೀ ವೀರಾಂಜನೇಯ ದೇವಸ್ಥಾನ ಸಮಿತಿಯ ನೇತೃತ್ವದಲ್ಲಿ 'ಲಿಂಗರಾಜ ನಗರ ದಸರಾ-2023' ಪ್ರಯುಕ್ತ ಈಗಾಗಲೇ ಪೂಜಾ ಕಾರ್ಯಕ್ರಮಗಳು ಆರಂಭವಾಗಿವೆ.

ಅ.21ರಂದು 7 ಗಂಟೆಗೆ ದಸರಾ ಆಚರಣೆಯ ಮಹತ್ವ ಕುರಿತು ಉಪನ್ಯಾಸ ನಡೆಯಲಿದ್ದು, ಉದ್ಯಮಿ ರಮೇಶ ಗುಂಡಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಧಾರವಾಡ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಪ್ರೊ. ಕೆ.ಎಸ್ ಕೌಜಲಗಿ ಉಪನ್ಯಾಸ ನೀಡಲಿದ್ದಾರೆ. ರಾಜ್ಯ ಜಾನಪದ ಪ್ರಶಸ್ತಿ ಪುರಸ್ಕೃತ ಪ್ರಭು ಕುಂದರಗಿ ಮತ್ತು ತಂಡದವರಿಂದ ಜಾನಪದ ಗೀತೆಗಳ ಕಾರ್ಯಕ್ರಮ ಮತ್ತು ವಾಸುದೇವ ಕಾರೇಕರ್ ಇವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ನಡೆಯಲಿದೆ. ದೇವಸ್ಥಾನ ಸಮಿತಿಯ ಗೌರವಾಧ್ಯಕ್ಷ ಸೋಮನಗೌಡ ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಅ.22ರ ಸಂಜೆ 6.30ಕ್ಕೆ ಲಿಂಗರಾಜ ನಗರದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಉದ್ಯಮಿ ಹರೀಶ್ ಕಾರೇಕರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಶಿಕ್ಷಣ ತಜ್ಞ ಪ್ರೊ. ಮಹೇಶ್ ದ್ಯಾವಪ್ಪನವರ ಆಗಮಿಸಲಿದ್ದು, ಶರಣಪ್ಪ ಕೊಟಗಿ ಅಧ್ಯಕ್ಷತೆ ವಹಿಸಲಿದ್ದಾರೆ.

ಅ.23ರಂದು ಸಂಜೆ ಬಡಾವಣೆಯ ಮಹಿಳೆಯರಿಂದ ದಾಂಡಿಯಾ ನೃತ್ಯ ನಡೆಯಲಿದ್ದು, ಶಾಸಕ ಮಹೇಶ ಟೆಂಗಿನಕಾಯಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ನಗರ ಪಾಲಿಕೆ ಸದಸ್ಯ ಉಮೇಶಗೌಡ ಕೌಜಗೇರಿ, ಉದ್ಯಮಿ ರಾಜೇಂದ್ರ ಶೆಟ್ಟಿ ಆಗಮಿಸಲಿದ್ದಾರೆ. ದೇವಸ್ಥಾನ ಸಮಿತಿಯ ಅಧ್ಯಕ್ಷ ಜಿ.ವಿ ವಳಸಂಗ ಅಧ್ಯಕ್ಷತೆ ವಹಿಸಲಿದ್ದಾರೆ.

ಅ.23ರ ಸಂಜೆ 4 ಗಂಟೆಗೆ ಪಲ್ಲಕ್ಕಿ ಮತ್ತು ವಾದ್ಯಮೇಳದ ಮೆರವಣಿಗೆಯೊಂದಿಗೆ ಲಿಂಗರಾಜ ನಗರದ ಹಿರಿಯರಾದ ಶಿವಶಂಕರ ಹಿರೇಮಠ, ಎಸ್.ಎಂ ತೊಗರ್ಸಿ, ವಿ.ಬಿ ಕಣವಿ ಮತ್ತು ಸಿ.ಆರ್ ಹಿರೇಮಠ ಇವರ ನೇತೃತ್ವದಲ್ಲಿ ಬನ್ನಿ ಮುಡಿಯುವ ಕಾರ್ಯ ನಡೆಯಲಿದೆ.

# ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಪದಾಧಿಕಾರಿಗಳಿಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ಎಪಿಎಂಸಿ ವಾಕಿಂಗ್ ಮಿತ್ರ ಮಂಡಳಿ ವತಿಯಿಂದ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ 2022-23ನೇ ಸಾಲಿನ ಅಧ್ಯಕ್ಷ ಹಾಗೂ ಪದಾಧಿಕಾರಿಗಳನ್ನು ಎಪಿಎಂಸಿಯಲ್ಲಿರುವ ಲಕ್ಷ್ಮೀವೆಂಕಟೇಶ್ವರ ಟ್ರೇಡಿಂಗ್ ಕಂಪನಿಯಲ್ಲಿ ಸನ್ಮಾನಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಚನ್ನವೀರಪ್ಪ ಹುಣಸಿಕಟ್ಟಿ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘವು ನಡೆದು ಬಂದ ದಾರಿಯನ್ನು ಸ್ಮರಿಸಿದರು. ಸಂಘದ ಅಧ್ಯಕ್ಷ ಮಧುಸೂಧನ ಪುಣೇಕರ ಸನ್ಮಾನಿತರಾದ ಈಶಣ್ಣ ಮುನವಳ್ಳಿ, ತಾತನಗೌಡ ಪಾಟೀಲ, ಪ್ರಕಾಶ ಉಗಲಾಟದ, ರಾಜು ಮಲ್ಲಾಡದ, ಶಿದ್ದಣ್ಣ ಹಲವಾಗಲಿ, ಮುರುಗೇಶ ಬಡ್ನಿ, ಅಶೋಕ ಪಾಟೀಲ, ರಮೇಶ ಶಿಗ್ಲಿಯವರನ್ನು ಪರಿಚಯಿಸಿ ಸನ್ಮಾನಿಸಿದರು.

ಸಭೆಯಲ್ಲಿ ಉಮೇಶ ನಾಲ್ವಾಡ, ಸುರೇಶ ರಡ್ಡೇರ, ಶರಣು ಗದಗ, ಅರವಿಂದ ಕಾಮತ, ಲಿಂಗರಾಜ ತೋಟದ, ಮಹಾಂತೇಶಗೌಡ ಪಾಟೀಲ, ಬಾಪುಗೌಡ ಸಂಕನಗೌಡ, ಚೇತನ ಶಿವಪ್ಪಗೌಡ್ರ, ವಿಜಯ ಗೊಡಚಿ, ಮಂಜುನಾಥ ಬೇಲೇರಿ, ವಿರುಪಾಕ್ಷಯ್ಯ ಹಿರೇಮಠ, ರೇಣುಕಾಪ್ರಸಾದ ಹಿರೇಮಠ, ಮೌಲಾಲಿ ಮುಲ್ಲಾನವರ, ಶರಣಪ್ಪಗೌಡ ಪವಾಡಿಗೌಡ್ರ, ಶಿದ್ಧಣ್ಣ ಪಾಟೀಲ, ಸಂಜಯ ಬಾಗಮಾರ, ಬಾಬುಗೌಡ ಬಾಪುಗೌಡ್ರ ಮುಂತಾದವರು ಉಪಸ್ಥಿತರಿದ್ದರು.

## ಉದಯೋನ್ಮುಖ ನಟರ ವಿನೂತನ ಪ್ರಯೋಗ 'ಪೈಕಾ' ಚಲನಚಿತ್ರದ ಟೈಟಲ್ ಅನಾವರಣ



■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಮೈಡ್ರೀಮ್ ಫೀಲ್ಮ್ ಪ್ರೊಡಕ್ಷನ್ ಅವರ 'ಪೈಕಾ' ಎಂಬ ವಿನೂತನ ಹೆಸರಿನ ಉದಯೋನ್ಮುಖ ನಟ-ನಟಿಯರ ಹೊಸ ತಂಡದ ಅಭಿನಯದ ಚಲನಚಿತ್ರ ಪ್ರೇಕ್ಷಕರ ಎದುರು ಬೆಳ್ಳಿತೆರೆ ಮೇಲೇರಲು ಸಜ್ಜಾಗಿದೆ.

ಹುಬ್ಬಳ್ಳಿಯ ಸವಾಯಿ ಗಂಧರ್ವ ಕಲಾಮಂದಿರದಲ್ಲಿ ನಡೆದ 'ಸವಿಗಾನ' ಕಾರ್ಯಕ್ರಮದಲ್ಲಿ ಸಂತೋಷ್ ವೆರ್ಣೇಕರರವರ ನೇತೃತ್ವದ ಪೈಕಾ ಚಲನಚಿತ್ರದ ಟೈಟಲ್ ಅನ್ನು ಶಾಸಕ ಮಹೇಶ್ ತೆಂಗಿನಕಾಯಿ ಅವರು ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ರವೀಂದ್ರ ರಾಮದುರ್ಗಕರ, ಸಂತೋಷ ಶೆಟ್ಟಿ ಚಿತ್ರತಂಡದ ಕಲಾವಿದರು, ಪ್ರಮುಖರು ಪಾಲ್ಗೊಂಡಿದ್ದರು.

ಹಿರಿಯ ಜೀವಿ ಗಂಗಮ್ಮ ಗಚ್ಚಿನಮನೆ ಎಂಬ ಕಲಾ ಆರಾಧಕಿ ಈ ಪ್ರಯೋಗದ ಚನಲಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಆ ಮೂಲಕ ಕಲಾ ಆರಾಧನೆಗೆ ವಯಸ್ಸು ಅಡ್ಡಿಯಾಗದು ಎಂಬುದನ್ನು ಗಂಗಮ್ಮ ನಿರೂಪಿಸಿದ್ದಾರೆ. ನವ ನಿರ್ದೇಶಕ ರಮೇಶ ಅವರೊಡನೆ ಅನುಭವಿ ತಂತ್ರಜ್ಞರ ತಂಡ, ಚಿತ್ರ ನಿರ್ಮಾಣದ ಯಶಸ್ಸಿಗೆ ದಿಟ್ಟ ಹೆಜ್ಜೆ ಇಟ್ಟು ಟೊಂಕ ಕಟ್ಟಿ ನಿಂತಿದ್ದಾರೆ.

ಗಂಗಮ್ಮ ಅವರ ಈ ಚಿತ್ರಕ್ಕೆ ಮನ್ವರ್ಷಿ ನವಲಗುಂದ ಅವರ ಸಾಹಿತ್ಯ ರಚಿಸಿದ್ದು. ವಿಕಾಸ್ ರಜತ್ ಅವರ ಸಂಗೀತ ನಿರ್ದೇಶನ ಇದೆ. ಹಿನ್ನೆಲೆ ಸಂಗೀತ ಮನ್‌ದೀಪ್ ಅವರು ವಹಿಸಿಕೊಂಡಿದ್ದು, ಛಾಯಾಗ್ರಹಣ ದೇವು, ಚಂದ್ರು ಬಂಡೆ ಸಾಹಸ, ಡಾ.ಪ್ರಭು ಗಂಜಿಹಾಳ್, ಡಾ. ವೀರೇಶ್ ಹಂಡಗಿರವರ ಪತ್ರಿಕಾ ಸಂಪರ್ಕ, ದೊಡ್ಡ ಆಲಹಳ್ಳಿಯ ವಿಶ್ವಅಮರ್ ಅವರದಾಗಿದೆ.

ಗಂಗಮ್ಮ ಗಚ್ಚಿನಮನೆ ಅವರ ಜೊತೆ ಸಹ ನಿರ್ಮಾಪಕರು ರಮೇಶ್ .ಎಸ್ ಇದ್ದಾರೆ.ಕಥೆ-ಚಿತ್ರಕಥೆ ನಿರ್ದೇಶನ ಹೊಣೆಯನ್ನು ರಮೇಶ್.ಎಸ್ ಹೊತ್ತಿದ್ದಾರೆ. ಉಳಿದಂತೆ ಪ್ರಮುಖ ಪಾತ್ರಗಳ ಆಯ್ಕೆ ನಡೆದಿದ್ದು ಮುಂದಿನ ತಿಂಗಳು ಚಿತ್ರೀಕರಣ ಆರಂಭವಾಗಲಿದೆ ಎಂದು ನಿರ್ಮಾಪಕಿ ಗಂಗಮ್ಮ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.


## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545




■ವಿಜಯಸಾಕ್ಷಿ ಸುದ್ದಿ, ಗದಗ

ತೊಗಟವೀರ ಕ್ಷತ್ರಿಯ ಸಮಾಜದ ಚೌಡೇಶ್ವರಿ ದೇವಸ್ಥಾನದಲ್ಲಿ ನವರಾತ್ರಿ ಉತ್ಸವದ ನಿಮಿತ್ತ ಸಮಾಜದ ಸುಮಂಗಲಿಯರಿಂದ ಚೌಡೇಶ್ವರಿ ದೇವಿಗೆ ನಾಮಾವಳಿ ಹಾಗೂ ಮಂಗಳಾರತಿಯೊಂದಿಗೆ ಸತತ 9 ದಿನಗಳ ಪೂಜೆ ನೆರಿಸಲಾಗುತ್ತಿದೆ. ತನ್ನಿಮಿತ್ತ 7ನೇ ದಿನದ ಪೂಜಾ ಕಾರ್ಯಕ್ರಮ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

## ನವರಾತ್ರಿ ಪ್ರಯುಕ್ತ ವಿವಿಧ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಸಿದ್ದಲಿಂಗ ನಗರದ ನೀರಿನ ಟ್ಯಾಂಕ್ ಬಳಿಯ ಶ್ರೀ ಬನ್ನಿ ಮಹಾಂಕಾಳಿ ಸೇವಾ ಟ್ರಸ್ಟ್ ಕಮಿಟಿ, ಮಹಿಳಾ ಮಂಡಳಿ ಮತ್ತು ತರುಣ ಯುವ ಸಂಘದ ವತಿಯಿಂದ ದಸರಾ ಉತ್ಸವ-2023ನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಅ.20ರಂದು ನರಗುಂದ ಶಾಸಕ ಸಿ.ಸಿ ಪಾಟೀಲ್ ಅವರ 65ನೇ ಹುಟ್ಟು ಹಬ್ಬದ ಪ್ರಯುಕ್ತ ಸಿ.ಸಿ ಪಾಟೀಲ್ ಅಭಿಮಾನಿ ಬಳಗದ ವತಿಯಿಂದ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸದ್ಭಕ್ತರು ಅಭಿಮಾನಿಗಳು ಪಾಲ್ಗೊಳ್ಳುವಂತೆ ಕೋರಲಾಗಿದೆ.

ಅ.22ರಂದು ಶ್ರೀ ದುರ್ಗಾಷ್ಟಮಿಯ ನಿಮಿತ್ತ ಮಕ್ಕಳಿಗೆ ನವದುರ್ಗೆಯರ ವೇಷಭೂಷಣ, ಮಧ್ಯಾಹ್ನ ಮುಳುಗುಂದ ರಸ್ತೆಯ ಶ್ರೀ ಅಂಬಾಭವಾನಿ ದೇವಸ್ಥಾನದಲ್ಲಿ ಉಡಿ ತುಂಬುವ ಕಾರ್ಯಕ್ರಮ, ನಂತರ ಅನ್ನಸಂತರ್ಪಣೆ ಜರುಗಲಿದೆ. ಅ.23ರಂದು ಮಹಾನವಮಿ, ಆಯುಧ ಪೂಜೆ, ಅ.24ರಂದು ವಿಜಯದಶಮಿ, ಬನ್ನಿ ಮುಡಿಯುವ ಕಾರ್ಯಕ್ರಮಗಳು ಜರುಗಲಿವೆ ಎಂದು ಪ್ರಕಟಣೆ ತಿಳಿಸಿದೆ.

## 'ಲಿಂಗರಾಜ ನಗರ ದಸರಾ' ಇಂದಿನ ಕಾರ್ಯಕ್ರಮಗಳು

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಇಲ್ಲಿನ ಲಿಂಗರಾಜ ನಗರದ ನಾಗರಿಕರೆಲ್ಲರೂ ಸೇರಿ ಇದೇ ಮೊದಲ ಬಾರಿಗೆ ಬಡಾವಣೆ ಮಟ್ಟದ ದಸರಾ ಆಚರಣೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ. ಶ್ರೀ ಕಟ್ಟಿ ಮಂಗಳಾದೇವಿ ದೇವಸ್ಥಾನ ಹಾಗೂ ಶ್ರೀ ವೀರಾಂಜನೇಯ ದೇವಸ್ಥಾನ ಸಮಿತಿಯ ನೇತೃತ್ವದಲ್ಲಿ 'ಲಿಂಗರಾಜ ನಗರ ದಸರಾ-2023' ಪ್ರಯುಕ್ತ ಶ್ರೀ ವೀರಾಂಜನೇಯ ಉದ್ಯಾನದಲ್ಲಿ ಹಾಗೂ ಲಿಂಗರಾಜ ನಗರ ದಕ್ಷಿಣ ಸಮುದಾಯ ಭವನದ ಪಕ್ಕದಲ್ಲಿರುವ ಬನ್ನಿ ಮಹಾಂಕಾಳಿ ದೇವಿಗೆ ಬೆಳಗ್ಗೆ ಮತ್ತು ಸಂಜೆ ಪೂಜಾ ಕಾರ್ಯಕ್ರಮಗಳು ನಡೆಯುತ್ತಿವೆ.

ಅ. 22ರ ಸಂಜೆ 6.30ಕ್ಕೆ ಲಿಂಗರಾಜ ನಗರದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಉದ್ಯಮಿ ಹರೀಶ್ ಕಾರೇಕರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಶಿಕ್ಷಣ ತಜ್ಞ ಪ್ರೊ. ಮಹೇಶ್ ದ್ಯಾವಪ್ಪನವರ ಆಗಮಿಸಲಿದ್ದು, ಸಮಾಜ ಸೇವಕರಾದ ಶರಣಪ್ಪ ಕೊಟಗಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ಜ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಪುಣ್ಯ ಸ್ಮರಣೆಯಲ್ಲಿ ತೋಂ.ಸಿದ್ದರಾಮ ಶ್ರೀಗಳು

# ಸಿದ್ಧಲಿಂಗ ಶ್ರೀಗಳ ಸಮಾಜಮುಖಿ ಕೊಡುಗೆ ಅಪಾರ

■ವಿಜಯಸಾಕ್ಷಿ ಸುದ್ದಿ, ಗದಗ

ಬಹುಮುಖಿಗಳಾಗಿ ಕೆಲವೇ ಕೆಲವು ವ್ಯಕ್ತಿಗಳು ಸಮಾಜದಲ್ಲಿ ನೆಲೆಸಿ, ಸಮಾಜದಲ್ಲಿರುವ ಕಂದಾಚಾರ, ಮೌಢ್ಯತೆಯನ್ನು ಹೊಡೆದೋಡಿಸಲು ತ್ಯಾಗದ ಬದುಕು ನಡೆಸಿದವರ ಪುಣ್ಯಸ್ಮರಣೆಯನ್ನು ಮಾಡುತ್ತಾರೆ. ಆ ಹಿನ್ನೆಲೆಯಲ್ಲಿ ಲಿಂ.ಡಾ.ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸಮಾಜಮುಖಿ ಕೊಡುಗೆ ಅಪಾರವಾದದ್ದು ಎಂದು ಡಾ.ಜಗದ್ಗುರು ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ನುಡಿದರು.

ಇಲ್ಲಿನ ಡಂಬಳ ಗ್ರಾಮದ ಜಗದ್ಗುರು ತೋಂಟದ ಅರ್ಧನಾರೀಶ್ವರರ ಮಠದ ಆವರಣದಲ್ಲಿ ಲಿಂ.ಪೂ. ಡಾ. ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ 5ನೇ ವರ್ಷದ ಪುಣ್ಯ ಸ್ಮರಣೆಯ ನಿಮಿತ್ತ ಅವರ ಭಾವಚಿತ್ರಕ್ಕೆ ಪುಜೆ ಸಲ್ಲಿಸಿ ಅವರು ಮಾತನಾಡಿದರು.

ಪರಿಸರದ ಶ್ರೀ ನಂದಿವೇರಿ ಮಠದ ಜಗದ್ಗುರು ಶಿವಕುಮಾರ ಶ್ರೀಗಳು ಮಾತನಾಡಿ, ಲಿಂ.ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ನಿರಂತರ ಪರಿಸರ ಕಾಳಜಿಯಿಂದಾಗಿ ಇವತ್ತು ಕಪ್ಪತ್ತಗುಡ್ಡ ಶುದ್ಧ ಗಾಳಿ ಹೊಂದುವಂತಾಗಿದೆ. ಕನ್ನಡ ನಾಡು-ನುಡಿಯ ಪತಾಕೆಯನ್ನು ಹಾರಿಸಿದ ಶ್ರೇಯಸ್ಸು ಅವರದಾಗಿದೆ ಎಂದು ಹೇಳಿದರು.



ಮಾಜಿ ಸಹಕಾರ ಸಚಿವ ಎಸ್.ಎಸ್ ಪಾಟೀಲ ಮಾತನಾಡಿ, ಸಾಮಾಜಿಕ ಬದಲಾವಣೆಯೊಂದಿಗೆ ಯುವಕರಲ್ಲಿ ಉದ್ಯೋಗ ಹೆಚ್ಚಿಸುವುದಕ್ಕಾಗಿ ಗ್ರಾಮೀಣ ಭಾಗದಲ್ಲಿ ಐಟಿಐ ಕಾಲೇಜುಗಳನ್ನು ತೆರೆದು ಉದ್ಯೋಗ ನೀಡುವ ಕಾರ್ಖಾನೆಯಂತಾಗಿಸಿದ ಶ್ರೇಯಸ್ಸು ಶ್ರೀಗಳದ್ದಾಗಿದೆ ಎಂದರು.

ಗೋಣಿಬಸಪ್ಪ ಕೊರ್ಲಹಳ್ಳಿ ಮಾತನಾಡಿ, ಮಠಮಾನ್ಯಗಳೆಂದರೆ ಧರ್ಮಪ್ರಚಾರಕ್ಕೆ ಸೀಮಿತವಲ್ಲ. ಶ್ರೀಗಳು ಸಮಾಜದಲ್ಲಿನ ಮೌಢ್ಯ, ಕಂದಾಚಾರ ಕಿತ್ತೊಗೆದು, ಸಮಾಜದಲ್ಲಿ ಉತ್ತಮ ಸಂಸ್ಕೃತಿ-ಸಂಸ್ಕಾರ ಎತ್ತಿ ಹಿಡಿದರು. ಬಡವರ ಹಿತಕ್ಕಾಗಿ ನೂರಾರು ಶಿಕ್ಷಣ ಸಂಸ್ಥೆಗಳು ಕಟ್ಟಿ ಬೆಳೆಸಿ, ಜಾತ್ಯಾತೀತತೆಯ ಮಹತ್ವವನ್ನು ತೋರಿಸಿಕೊಟ್ಟು ನವ ಸಮಾಜ ನಿರ್ಮಾಣ, ಹೋರಾಟಗಳಿಗೆ ಶಕ್ತಿ ನೀಡಿದರು. ಅವರ ವಿಚಾರಗಳು ಸದಾ ಕಾಲ ಹಸಿರಾಗಿರುತ್ತವೆ ಎಂದು ಹೇಳಿದರು.

ಸಾಹಿತಿಗಳು, ಲೇಖಕರು ರಚಿಸಿದ ಪುಸ್ತಕಗಳ ಪ್ರಕಟಣೆಗೆ ವೇದಿಕೆಯನ್ನು ಒದಗಿಸುತ್ತಾ ಸೇವೆ ಸಲ್ಲಿಸಿದ ಇವರಿಗೆ ಪುಸ್ತಕದ ಸ್ವಾಮಿಜಿ ಎಂದರು. ಪೀಠ ಪರಂಪರೆಯನ್ನು ಮರೆತು ಜಾತಿ-ಮತ ಬೇಧವಿಲ್ಲದೆ ಸಾಮಾನ್ಯರ ಸಮಸ್ಯೆಗೆ ಸ್ಪಂದಿಸಿ ಸಾಮಾನ್ಯರ ಶ್ರೀ ಎನಿಸಿಕೊಂಡರು. ಅವರ ಬದುಕಿನುದ್ದಕ್ಕೂ ಬಸವತತ್ವವನ್ನು ಬೆಳಗಿಸಲು ಶ್ರಮಿಸಿದರು. ಅವರ ವಿಚಾರಗಳನ್ನು, ಬದುಕನ್ನು ಗುರಿಯನ್ನಾಗಿಸಿಕೊಂಡರೆ ನಮ್ಮ ಬದುಕು ಸಾರ್ಥಕವಾಗುತ್ತದೆ ಎಂದು ಸಿದ್ಧರಾಮ ಮಹಾಸ್ವಾಮಿಗಳು ಹೇಳಿದರು.

ಕಾರ್ಯಕ್ರಮದಲ್ಲಿ ವಿ.ಎಸ್ ಯರಾಶಿ, ಮುತ್ತಣ್ಣ ಕೊಂತಿಕಲ್ಲ, ಜಿ.ವಿ ಹಿರೇಮಠ, ಪತ್ರಕರ್ತ ಸಿ.ಕೆ ಗಣಪ್ಪನವರ, ಸಿದ್ದಣ್ಣ ನಂಜಪ್ಪನವರ, ಗೌಸಿದ್ದಪ್ಪ ಬಿಸನಳ್ಳಿ, ಮಹೇಶ ಗಡಗಿ, ಬಶೀರಹಮ್ಮ ತಾಂಬೋಟಿ, ಬಾಬುಸಾಬ ಸರಕಾವಾಸ, ಮುತ್ತು ಹಾಳಕೇರಿ, ವಿರುಪಾಕ್ಷಪ್ಪ ಲಕ್ಕುಂಡಿ, ಎಮ್.ಎಸ್ ಯರಾಶಿ, ಅಶೋಕ ಹಡಪದ, ಕುಬೇರಪ್ಪ ಬಂಡಿ, ಆರ್.ಜಿ ಕೊರ್ಲಹಳ್ಳಿ, ಮರಿತಿಮ್ಮಪ್ಪ ಆದಮ್ಮನವರ, ಚಂದ್ರು ಯಳಮಲಿ, ಭೀಮಪ್ಪ ಗದಗಿನ, ಮಂಜು ಸಂಜೀವಣ್ಣವರ ಮುಂತಾದವರಿದ್ದರು.

# ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಸಮಗ್ರ ಮಾಹಿತಿ ವಿನಿಮಯ



■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಗದಗ ಜಿಲ್ಲಾ ಘಟಕದ ವತಿಯಿಂದ ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಯ ಅರ್ಜಿಗಳನ್ನು ಆಹ್ವಾನಿಸಿರುವ ಹಿನ್ನೆಲೆಯಲ್ಲಿ ನಗರದ ಕಾಳಮ್ಮ ದೇವಸ್ಥಾನದಲ್ಲಿ ಸಭೆ ನಡಸಲಾಯಿತು.

ಸಭೆಯಲ್ಲಿ ಜಿಲ್ಲಾ ವ್ಯವಸ್ಥಾಪಕ ಸಾಮಾನ್ಯ ಸೇವಾ ಕೇಂದ್ರದ (ಸಿ.ಎಸ್.ಸಿ.) ಅಧಿಕಾರಿ ಬಸವರಾಜ ಸೊರಟೂರ ಮಾತನಾಡಿ, ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಯ ಅಡಿ ದೊರೆಯುವ ವಿವಿಧ ಔದ್ಯೋಗಿಕ ಘಟಕಗಳಿಗೆ ಸಹಾಯಧನ, ಸ್ವಯಂ ವೃತ್ತಿ ಸೇರಿದಂತೆ ವಿವಿಧ ಯೋಜನೆಗಳ ಮಾಹಿತಿ ನೀಡಿದರು. ಜತೆಗೆ, ಅರ್ಜಿದಾರರು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ದಾಖಲಿಸಬೇಕಾದ ದಾಖಲೆಗಳ ಮಾಹಿತಿಯನ್ನು ತಿಳಿಸಿದರು.

ಜಿಲ್ಲಾ ಘಟಕದ ಅಧ್ಯಕ್ಷ ದೇವಿಂದ್ರಪ್ಪ ಬಡಿಗೇರ ಅಧ್ಯಕ್ಷತೆವಹಿಸಿದ್ದರು. ಜಿಲ್ಲಾ ಘಟಕದ ಗೌರವಾಧ್ಯಕ್ಷ ರಾಮಣ್ಣ ಕಮ್ಮಾರ, ಸುಧೀರ ಬಡಿಗೇರ, ಶ್ರೀ ವೀರಭದ್ರಪ್ಪ ಬಡಿಗೇರ, ಈರಣ್ಣ ಹಲವಾಗಲಿ, ಶೀರಪ್ಪ ಕಮ್ಮಾರ, ಮೃತ್ಯುಂಜಯ, ಶ್ರೀ ಅನಂತಪ್ಪ, ಸುಬ್ಬಣ್ಣ ಅರ್ಕಸಾಲಿ, ಶ್ರೀ ಕಾಳಮ್ಮದೇವಿ ದೇವಸ್ಥಾನದ ಅಧ್ಯಕ್ಷರು ಮುಂತಾದವರು ಉಪಸ್ಥಿತರಿದ್ದರು.

ಜಿಲ್ಲಾ ಯುವಘಟಕದ ಅಧ್ಯಕ್ಷ ಆನಂದ ಕಮ್ಮಾರ ನಿರೂಪಿಸಿದರು.

### ಡಾ. ತೋಂಟದ ಸಿದ್ಧಲಿಂಗಶ್ರೀಗಳ ಸ್ಮರಣೆ ಕಾರ್ಯಕ್ರಮದಲ್ಲಿ ಕೆ.ಎಸ್ ಪಲ್ಲೇದ

# ಕನ್ನಡ ನಾಡು-ನುಡಿಗೆ ಶ್ರೀಗಳ ಕೊಡುಗೆ ಅಪಾರ

■ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ನಾಡಿನಲ್ಲಿ ಕನ್ನಡ ಅನುಷ್ಠಾನಕ್ಕಾಗಿ ಜರುಗಿದ ಗೋಕಾಕ ಚಳವಳಿಗೆ ಅಡಿಪಾಯವನ್ನು ಹಾಕಿದವರು ತೋಂಟದ ಸಿದ್ಧಲಿಂಗ ಶ್ರೀಗಳು. ನಾಡು, ನುಡಿ, ನೆಲ, ಜಲ, ಪರಿಸರದ ಪ್ರಶ್ನೆ ಬಂದಾಗ ದಂಡನಾಯಕರಂತೆ ಕಾರ್ಯ ಮಾಡಿದ್ದಾರೆ. ಕನ್ನಡ ನಾಡು-ನುಡಿಗೆ ಶ್ರೀಗಳ ಸೇವೆ ಅಪಾರವಾದುದು ಎಂದು ಬಸವ ಯೋಗ ಕೇಂದ್ರದ ಪ್ರಾಚಾರ್ಯ ಕೆ.ಎಸ್ ಪಲ್ಲೇದ ಅಭಿಪ್ರಾಯಪಟ್ಟರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ತೋಂಟದ ಸಿದ್ಧಲಿಂಗಶ್ರೀ ಕನ್ನಡ ಭವನ, ಕಸಾಪ ಕಾರ್ಯಾಲಯದಲ್ಲಿ ಜರುಗಿದ ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪೂಜ್ಯರು ಜನಸಾಮಾನ್ಯರ ಸ್ವಾಮಿಗಳಾಗಿದ್ದರು. ಸಾಮಾಜಿಕ ಸಮಸ್ಯೆಗಳಿಗೆ ಶಿವಾನುಭವ ವೇದಿಕೆ ಮೂಲಕ ದಿಟ್ಟ ಉತ್ತರ ನೀಡಿ, ಸರಕಾರ ಮತ್ತು ಸಮಾಜವನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದರು. ವ್ಯಕ್ತಿಯ ವೈಯಕ್ತಿಕ ಬದುಕು ಉತ್ತಮಗೊಳ್ಳಲು ಅನೇಕರಿಗೆ ಸಹಾಯ, ಸಹಕಾರ ನೀಡಿದ್ದಾರೆಂದು ತಿಳಿಸಿದರು.




ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಪರಿಸರ ಜಾಗೃತಿ, ಪುಸ್ತಕ ಪ್ರಕಟಣೆ, ಶಿಕ್ಷಣ ಪ್ರಸಾರ, ತಾರತಮ್ಯಗಳ ನಿವಾರಣೆಗೆ ಅವಿರತವಾಗಿ ಶ್ರಮಿಸಿದ ಶ್ರೀಗಳು ಸಾಮಾನ್ಯ ಸ್ವಾಮಿಗಳಾಗಿ ಬದುಕಿದರು. ಅಪ್ಪಟ ಬಸವತತ್ವವನ್ನು ಜೀವನ ಕ್ರಮವಾಗಿ ಮಾಡಿಕೊಂಡು ಬಹು ಆಯಾಮಗಳಲ್ಲಿ ಸಮಾಜವನ್ನು ತಿದ್ದಿ ತೀಡುವ ಕಾರ್ಯವನ್ನು ಪೂಜೆಯೆಂದು ಮಾಡಿದರು ಎಂದರು.

ಡಾ. ರಶ್ಮಿ ಅಂಗಡಿ, ಮಂಜುಳಾ ವೆಂಕಟೇಶಯ್ಯ, ಎಂ.ಡಿ ಮಾದರ, ಬಸವರಾಜ ನೆಲಜೇರಿ, ಡಾ. ರಾಜೇಂದ್ರ ಗಡಾದ, ಅನ್ನಪೂರ್ಣಕ್ಕ ಬಡಿಗಣ್ಣವರ, ವನಮಾಲಾ ಮಾನಶೆಟ್ಟಿ ಮೊದಲಾದವರು ಶ್ರೀಗಳ ವ್ಯಕ್ತಿತ್ವ ಬಿಂಬಿಸುವ ಕವಿತೆಗಳನ್ನು ಪ್ರಸ್ತುತಪಡಿಸಿದರು.

ಕೆ.ಎಚ್ ಬೇಲೂರ, ರತ್ನಕ್ಕ ಪಾಟೀಲ, ಬಸವರಾಜ ಗಣಪ್ಪನವರ, ಸಿ.ಎಂ ಮಾರನಬಸರಿ, ಶರಣಪ್ಪ ಹೊಸಂಗಡಿ, ಎಸ್.ಎಸ್ ಕಳಸಾಪೂರಶೆಟ್ಟರ, ಶಾರದಾ ಬಾಣದ, ಎಂ.ಎಚ್ ಸವದತ್ತಿ, ಡಿ.ಎಸ್ ಬಾಪುರಿ, ಜ್ಯೋತಿ ಹೇರಲಗಿ, ವಿಶಾಲ ಪಾಟೀಲ, ನಿರ್ಮಲಾ ತರವಾಡೆ, ಅಮರೇಶ ರಾಂಪೂರ, ಜೆ.ಎನ್ ಪಾಟೀಲ ಮೊದಲಾದವರು ಭಾಗವಹಿಸಿದ್ದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಡಾ. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು.

# ಜಾಗೃತಿ ಅಭಿಯಾನಕ್ಕೆ ವ್ಯಾಪಾರಸ್ಥರ ಸಾಥ್

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಗದಗ ಜಿಲ್ಲಾ ಪೊಲೀಸ್ ಇಲಾಖೆಯಿಂದ ಗದುಗಿನಲ್ಲಿ ಶನಿವಾರ ಏರ್ಪಡಿಸಿದ್ದ ಥರ್ಡ್ ಐ, ಅಪರಾಧ ಜಾಗೃತಿ, ಮಾದಕ ವ್ಯಸನ ಮುಕ್ತ ಅಭಿಯಾನಕ್ಕೆ ಗದಗ ಗ್ರೇನ್ ಮಾರುಕಟ್ಟೆಯಲ್ಲಿ ಹಣ್ಣು, ಹೂವು, ಎಲೆ ಹಾಗೂ ಇತರೆ ಕಿರುಕುಳ ವ್ಯಾಪಾರಸ್ಥರ ಸಂಘ ಬೆಂಬಲ ವ್ಯಕ್ತಪಡಿಸುವ ಮೂಲಕ ಅಭಿಯಾನಕ್ಕೆ ಸಾಥ್ ನೀಡಿತು.

ನಗರದ ಮಹಾತ್ಮಾ ಗಾಂಧಿ ವೃತ್ತದಲ್ಲಿ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲರು ಈ ಅಭಿಯಾನಕ್ಕೆ ಚಾಲನೆ ನೀಡಿದರು.




ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇಮಗೌಡ ಸೇರಿದಂತೆ ಪೊಲೀಸ್ ಅಧಿಕಾರಿಗಳನ್ನೊಳಗೊಂಡ ರ್‍ಯಾಲಿ ನಗರದ ಹುಯಿಲಗೋಳ ನಾರಾಯಣರಾವ್ ವೃತ್ತಕ್ಕೆ ಆಗಮಿಸುತ್ತಿದ್ದಂತೆ ಗದಗ ಗ್ರೇನ್ ಮಾರುಕಟ್ಟೆಯಲ್ಲಿ ಸಂಘದ ಪದಾಧಿಕಾರಿಗಳು, ಸದಸ್ಯರು ರ್‍ಯಾಲಿಯಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ಶರಣಪ್ಪ ಸಾಸನೂರ, ಅಧ್ಯಕ್ಷ ಅಬ್ದುಲ್‌ರೆಹಮಾನ ಹುಯಿಲಗೋಳ, ಉಪಾಧ್ಯಕ್ಷ ರಾಜೇಸಾಬ ಅಡರಕಟ್ಟಿ, ಕಾರ್ಯದರ್ಶಿ ಶರಣು ಶಿಗ್ಲಿ, ಸಹ ಕಾರ್ಯದರ್ಶಿ ಮೀರಅಲಿ ಢಾಲಾಯತ, ಸದಸ್ಯರಾದ ಎ.ಎನ್ ಅನ್ಸಾರಿ, ರಿಯಾಜ ಅನ್ವರ್ ಖಾಜಿ, ವಿಜಯಕುಮಾರ ಬಾಗಮಾರ, ಗಣಪತಿ ಪಟಗೆ, ವೆಂಕಟರಮನ್ ಗುತ್ತಲ, ಮಹ್ಮದ್‌ಅಲಿ ರೋಣ, ಅಶ್ರಫ್‌ಅಲಿ ನಸಬಿ, ಅಜ್ಜಣ್ಣ ಮುಧೋಳ, ಪಿ.ಎಸ್ ಅರಸಿದ್ದಿ, ಅಶೋಕ ಭಾಂಡಗೆ, ಪರವೇಜ್ ಬೇಲೇರಿ, ತಿಪ್ಪಣ್ಣ ನೋನಾರೆ, ಮಹ್ಮದ್‌ಅಲಿ ತಂಬಾಕದ, ಮಂಜು ಲಕ್ಕುಂಡಿ, ಯಲ್ಲವ್ವ ಉಳ್ಳಿಕಾಶಿ ಸೇರಿದಂತೆ ಗದಗ ಗ್ರೇನ್ ಮಾರ್ಕೆಟ್‌ನ ವ್ಯಾಪಾರಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

## ಯುವ ಸಮುದಾಯ ಒಲಂಪಿಕ್‌ನಲ್ಲಿ ಪಾಲ್ಗೊಳ್ಳಲು ಸಹಕಾರಿ



▸▸ಮೊದಲನೇ ಪುಟದಿಂದ

ಪ್ರತಿ ದಿನ ಮೊದಲ ಬ್ಯಾಚ್ ಬೆಳಿಗ್ಗೆ 9.30ರಿಂದ ಮದ್ಯಾಹ್ನ 1.30ರವರೆಗೆ ಹಾಗೂ ಎರಡನೇ ಬ್ಯಾಚ್ ಮದ್ಯಾಹ್ನ 2.30ರಿಂದ 6.30ರವರೆಗೆ ನಿರಂತರವಾಗಿ ನಡೆಯಲಿವೆ.

ಸಚಿವ ಎಚ್.ಕೆ ಪಾಟೀಲ ಅವರು ಹಾಯಿ ದೋಣಿಗಳಿಗೆ ಹಾಗೂ ಭೀಷ್ಮ ಕೆರೆಗೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ನೆರವೇರಿಸುವ ಮೂಲಕ ತರಬೇತಿ ಶಿಬಿರಕ್ಕೆ ಚಾಲನೆ ನೀಡಿದರು.

ಹಾಯಿ ದೋಣಿ ಕ್ರೀಡೆಯು ಒಲಂಪಿಕ್ ಕ್ರೀಡೆಯಾಗಿದ್ದು, ಈ ಹಾಯಿದೋಣಿ ತರಬೇತಿ ಪಡೆಯುವ ಮೂಲಕ ಯುವ ಸಮುದಾಯ ಒಲಂಪಿಕ್ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಸಹಕಾರಿಯಾಗಿದೆ. ಈ ತರಬೇತಿ ಶಿಬಿರ ಯಶಸ್ವಿಯಾಗಲೆಂದು ಶುಭ ಕೋರಿದರು.

# ಸಮಾರಂಭವನ್ನು ವಿಶಿಷ್ಟ ರೀತಿಯಲ್ಲಿ ಸಂಭ್ರಮಿಸೋಣ

▸▸ಮೊದಲನೇ ಪುಟದಿಂದ

ಮೆರವಣಿಗೆಯು ವೀರನಾರಾಯಣ ದೇವಸ್ಥಾನದಿಂದ ಆರಂಭವಾಗಿ ಜಾಮಿಯಾ ಮಸೀದಿ, ಬಸವೇಶ್ವರ ಸರ್ಕಲ್, ಕೆ.ಎಚ್ ಪಾಟೀಲ ವೃತ್ತ, ಭೂಮರೆಡ್ಡಿ ಸರ್ಕಲ್, ಜನರಲ್ ಕಾರ್ಯಪ್ಪ ಸರ್ಕಲ್ ಮಾರ್ಗವಾಗಿ ಕಾಟನ್ ಸೇಲ್ ಸೊಸೈಟಿ ಆವರಣ ತಲುಪಲಿದೆ. ಮಾರ್ಗದುದ್ದಕ್ಕೂ ಬೀದಿಗಳ ಇಕ್ಕೆಲಗಳಲ್ಲಿ ದೀಪಾಲಂಕಾರ ಮಾಡಬೇಕು. ಜೊತೆಗೆ ಪ್ರಮುಖ ವೃತ್ತಗಳಲ್ಲಿ ದೀಪಾಲಂಕಾರ ಮಾಡಬೇಕು. ನಗರದ ಸ್ವಚ್ಛತೆಗೆ ಆದ್ಯತೆ ವಹಿಸಬೇಕೆಂದು ಸೂಚಿಸಿದರು.

ನಗರದಲ್ಲಿರುವ ಕುಮಾರವ್ಯಾಸ ಕಂಬಕ್ಕೆ ವಿಶೇಷ ದೀಪಾಲಂಕಾರ ಮಾಡಬೇಕು. ಜೊತೆಗೆ ಭೀಷ್ಮ ಕೆರೆ ಸೇರಿದಂತೆ ವಿವಿಧೆಡೆ ದೀಪಾಲಂಕಾರ ಕಂಗೊಳಿಸುವಂತಾಗಬೇಕು. ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಬೇಕು. ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಜರುಗುವ ವೇದಿಕೆ ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಪಾಲನೆ, ಸಂಚಾರ ನಿಯಂತ್ರಣ ವ್ಯವಸ್ಥಿತವಾಗಿ ನಿರ್ವಹಿಸಬೇಕು ಎಂದರು.

ಅತಿಥಿಗಳ ಆಹ್ವಾನ, ಆಮಂತ್ರಣ ಪತ್ರಿಕೆ, ವೇದಿಕೆ ನಿರ್ಮಾಣ, ಬೀದಿಗಳ ಸ್ವಚ್ಛತೆ, ದೀಪಾಲಂಕಾರ, ವೇದಿಕೆ ಕಾರ್ಯಕ್ರಮಕ್ಕೆ ಸಾರ್ವಜನಿಕರನ್ನು ಕರೆತರುವ ಬಗ್ಗೆ ಸೇರಿದಂತೆ ಇನ್ನಿತರ ವಿಷಯಗಳ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಸರ್ಕಾರಿ ಮುಖ್ಯ ಸಚೇತಕ, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಮ್, ಉಪವಿಭಾಗಾಧಿಕಾರಿ ವೆಂಕಟೇಶ ನಾಯ್ಕ, ತಹಸೀಲ್ದಾರ ಶ್ರೀನಿವಾಸ ಮೂರ್ತಿ, ಜಿ.ಪಂ ಉಪಕಾರ್ಯದರ್ಶಿ ಸಿ.ಆರ್ ಮುಂಡರಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ರವಿ ಗುಂಜೀಕರ್, ಆಹಾರ ಇಲಾಖೆಯ ಉಪನಿರ್ದೇಶಕ ಗಂಗಪ್ಪ, ಪ್ರಾದೇಶಿಕ ಸಾರಿಗೆ ಅಧಿಕಾರಿ ಮಂಜುನಾಥ ಶಿರಾಳೆ, ಪಶು ಸಂಗೋಪನಾ ಇಲಾಖೆಯ ಉಪನಿರ್ದೇಶಕ ಡಾ.ಹುಲಗಣ್ಣವರ, ಅಂಕಿ-ಸಂಖ್ಯೆ ಸಂಗ್ರಹಣಾಧಿಕಾರಿ ಎ.ಎ ಕಂಬಾಳಿಮಠ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್ ನೀಲಗುಂದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪಿ.ವೈ ಶೆಟ್ಟೆಪ್ಪನವರ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ರಮೇಶ ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಮಾರುತಿ ಬ್ಯಾಕೋಡ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕನಿರ್ದೇಶಕ ವೀರಯ್ಯ ಸ್ವಾಮಿ, ವಾರ್ತಾಧಿಕಾರಿ ವಸಂತ ಮಡ್ಲೂರ, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶರಣು ಗೋಗೇರಿ , ಡಿಡಿಪಿಐ ಎಂ.ಎ ರಡ್ಡೇರ, ಗಣ್ಯರಾದ ಸಿದ್ದು ಪಾಟೀಲ, ಬಿ.ಬಿ ಅಸೂಟಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಹಾಜರಿದ್ದರು.

## ಬೆಟಗೇರಿ ಎಸ್‌ಎಸ್‌ಕೆ ದಸರಾ ಉತ್ಸವ: ಇಂದು ಆಟೋಟ ಸ್ಪರ್ಧೆ

■ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ಎಸ್‌ಸ್‌ಕೆ ದಸರಾ ಉತ್ಸವ ಸಮಿತಿ ಅ. 22ರಂದು ಬೆಳಿಗ್ಗೆ 9ಕ್ಕೆ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ಮೂರು ಕಾಲಿನ ಓಟ, ಲಿಂಬು ಚಮಚೆ, ಗೋಣಿ ಚೀಲ ಓಟ, ಸ್ಲೋ ಸೈಕ್ಲಿಂಗ್ ಆಟಗಳ ಸ್ಪರ್ಧೆಯನ್ನು ಏರ್ಪಡಿಸಿದೆ.

ಬೆಟಗೇರಿ ಜಗದಂಬಾ ದೇವಸ್ಥಾನದಿಂದ, ದಂಡಿನ ದುರ್ಗಮ್ಮನ ದೇವಸ್ಥಾನದವರೆಗೆ ವೇಗದ ಸೈಕಲ್ ಸ್ಪರ್ಧೆ ಸಹ ಹಮ್ಮಿಕೊಳ್ಳಲಾಗಿದೆ. ನಂತರ ಅಂಬಾಭವಾನಿ ದೇವಸ್ಥಾನದಲ್ಲಿ ಸ್ಮರಣ ಶಕ್ತಿ ಸ್ಪರ್ಧೆ, ಚೆಸ್ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಸಾಯಂಕಾಲ 6 ಗಂಟೆಗೆ ದುರ್ಗಾಷ್ಟಮಿ ಪೂಜಾ ಸಮಾರಂಭ ಜರುಗುವುದು ಎಂದು ಎಸ್‌ಎಸ್‌ಕೆ ದಸರಾ ಉತ್ಸವ ಸಮಿತಿ ಪ್ರಕಟಣೆ ತಿಳಿಸಿದೆ.

# ಕರವೇ ವತಿಯಿಂದ ಕುಡಿಯುವ ನೀರಿನ ವ್ಯವಸ್ಥೆ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಟಾಂಗಾ ಕೂಟ ಸರ್ಕಲ್‌ನಲ್ಲಿ ಶನಿವಾರ ಗದಗ ಜಿಲ್ಲಾ ಪೊಲೀಸ್ ವತಿಯಿಂದ ಹಮ್ಮಿಕೊಡಿದ್ದ ಥರ್ಡ್ ಐ ಹಾಗೂ ಮಾದಕ ವ್ಯಸನ ಮುಕ್ತ ಜಿಲ್ಲೆ ಎಂಬ ಜಾಗೃತಿ ಅಭಿಯಾನದಲ್ಲಿ ಪಾಲ್ಗೊಂಡ ಎಲ್ಲರಿಗೂ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಮಿಕ ಘಟಕದ ವತಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಅಳಿಲು ಸೇವೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕರವೇ ಗದಗ ಕಾರ್ಮಿಕ ಘಟಕದ




ಪ್ರಧಾನ ಕಾರ್ಯದರ್ಶಿ ತೌಸಿಫ ಡಾಲಾಯತ್, ಇರ್ಫಾನ್ ತಾಳಿಕೋಟೆ, ವಿನಾಯಕ ಬದಿ, ದಾವಲ್‌ಸಾಬ್ ತಹಸೀಲ್ದಾರ್, ಇಸಾಕ್ ನದಾಫ್, ಶೋಭಾ ಕಲಾಲ್, ಮುಬಾರಕ್ ಮುಲ್ಲಾ ಮುಂತಾದ ಕಾರ್ಯಕರ್ತರು ಉಪಸ್ಥಿತರಿದ್ದರು.

# ಆತಂಕ ಸೃಷ್ಟಿಸಿದ್ದ ಕರಡಿ ಸೆರೆ; ನಿಟ್ಟುಸಿರು ಬಿಟ್ಟ ಜನತೆ

■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ತಾಲೂಕಿನ ಕೆ. ಕಲ್ಲಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ರೈತಾಪಿ ಸಮುದಾಯ ಹಾಗೂ ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸಿ ದಾಳಿ ಮಾಡುತ್ತಿದ್ದ ಕರಡಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದಿದ್ದಾರೆ.ಇದರಿಂದಾಗಿ, ಆತಂಕದ ಬದುಕು ಸಾಗಿಸುತ್ತಿದ್ದ ಅಲ್ಲಿನ ನಿವಾಸಿಗಳು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ.

ಶುಕ್ರವಾರ ರಾತ್ರಿ ವಿಜಯನಗರ ಜಿಲ್ಲೆಯ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅರ್ಸಾಲಾನ್ ಅವರ ಮಾರ್ಗದರ್ಶನದಲ್ಲಿ ಕಳೆದ ಮೂರು ನಾಲ್ಕು ದಿನಗಳ ಅವಿರತ ಕಾರ್ಯಾಚರಣೆಯನ್ನು ಕೈಗೊಳ್ಳುವ ಮೂಲಕ ಇಲ್ಲಿನ ಅರಣ್ಯ ಇಲಾಖೆ ಸಿಬ್ಬಂದಿ, ಶುಕ್ರವಾರ ಕರಡಿಯನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಹಲವಾರು ದಿನಗಳಿಂದಲೂ ಸ್ಥಳೀಯರ ಮೇಲೆ ಹಠತ್ ದಾಳಿ ಮಾಡುತ್ತಿದ್ದ ಕರಡಿಯಿಂದ ಜನರು ಭಯಭೀತರಾಗಿದ್ದರು. ಕರಡಿಯ ಸೆರೆಯಿಂದ ಜನರಲ್ಲಿದ್ದ ಆತಂಕ ದೂರವಾಗಿದೆ ಎನ್ನುತ್ತಾರೆ ಅರಣ್ಯ ಇಲಾಖೆಯ ವರಿಷ್ಠರು. ಸೆರೆ ಸಿಕ್ಕ ಕರಡಿಯನ್ನು ಮೇಲಾಧಿಕಾರಿಗಳ



ಆದೇಶದಂತೆ ಭದ್ರಾ ಅಭಯಾರಣ್ಯಕ್ಕೆ ಬಿಡಲಾಗುವುದು ಎಂದು ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಕೆ.ಮಲ್ಲಪ್ಪ ತಿಳಿಸಿದ್ದಾರೆ. ಕರಡಿ ಸೆರೆಗಾಗಿ ನಡೆಸಿದ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಬಾಬು ಮೇದ, ವಲಯ ಅರಣ್ಯಾಧಿಕಾರಿ ಕೆ.ಮಲ್ಲಪ್ಪ, ಮಂಜ್ಯ ನಾಯ್ಕ್, ರಮೇಶ, ದಶರಥ ರಾಥೋಡ್, ಕರಿಬಸಯ್ಯ, ಪಿಎಸ್‌ಐ ನಾಗರತ್ನ, ಡಾ.ವಾಣಿ, ಶಿವಕುಮಾರ ಜ್ಯೋತಿ ಹಾಗೂ ಇತರರು ಭಾಗವಹಿಸಿದ್ದರು.

# ಅಸಮರ್ಪಕ ವಿದ್ಯುತ್ ಪೂರೈಕೆ; ಪ್ರತಿಭಟನೆ ಎಚ್ಚರಿಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ರೈತರ ನೀರಾವರಿ ಪಂಪಸೆಟ್‌ಗಳಿಗೆ ಹಗಲು ವೇಳೆ 7ಗಂಟೆಯ ಅವಧಿಗೆ ನಿರಂತರ ವಿದ್ಯುತ್ ಸರಬರಾಜು ಮಾಡುವಲ್ಲಿ ವಿಫಲರಾದರೆ, ಪುನಃ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ತಾಲೂಕಿನ ಲಕ್ಕುಂಡಿ ರೈತರು ಹೆಸ್ಕಾಂ ಇಲಾಖೆಗೆ ಎಚ್ಚರಿಕೆ ನೀಡಿದ್ದಾರೆ.

ರೈತ ಮುಖಂಡರಾದ ಪ್ರಕಾಶ ಅರಹುಣಶಿ, ದತ್ತಣ್ಣ ಜೋಶಿ, ರಮೇಶ ಹಳ್ಳಿ, ಸಿದ್ದು ಮುಳಗುಂದ, ವೆಂಕಟೇಶ ದೊಂಗಡೆ ಅವರು ಜಂಟಿ ಪತ್ರಿಕಾ ಹೇಳಿಕೆ ನೀಡಿ, ಕಳೆದ ಅ. 12ರಂದು ಗ್ರಾಮದ ಹೆಸ್ಕಾಂ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಹೆಸ್ಕಾಂ ಅಧಿಕಾರಿಗಳು, ಹಗಲು ವೇಳೆ 5ಗಂಟೆ ನಿರಂತರ ವಿದ್ಯುತ್ ಸರಬರಾಜು ಮಾಡುವುದಾಗಿ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಕೈಬಿಟ್ಟಿದ್ದೇವು.

ಅಧಿಕಾರಿಗಳು ಆ ಸಂದರ್ಭದಲ್ಲಿ ನೀಡಿದ ಭರವಸೆಯಂತೆ ಕೇವಲ ಮೂರು ದಿನ ಮಾತ್ರ ವಿದ್ಯುತ್ ಪೂರೈಸಿ, ಮೂಗಿಗೆ ತುಪ್ಪ ಹಚ್ಚು ಕೆಲಸ ಮಾಡಿದರು. ಈಗ ಪುನಃ ಕಳೆದ ಒಂದು ವಾರದಿಂದ ರಾತ್ರಿ ಸಮಯದಲ್ಲಿ 11ರಿಂದ 4ಘಂಟೆಯುವರೆಗೂ, 5 ತಾಸು ವಿದ್ಯುತ್ ಪೂರೈಕೆ ಮಾಡುತ್ತಿದ್ದಾರೆ. ಇದರಿಂದಾಗಿ, ರೈತರು ಬೆಳೆಗೆ ನೀರುಣಿಸಲು ತೇ-ಊಂದರೆ ಅನುಭವಿಸುತ್ತಿದ್ದಾರೆ. ಹಾವು, ಚೇಳು, ವಿಷ ಜಂತುಗಳ ಆತಂಕದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಹೆಸ್ಕಾಂ ಅಧಿಕಾರಿಗಳು ರೈತರು ಜೀವದ ಜತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ರೈತ ಮುಖಂಡರು ಹೇಳಿಕೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹೆಸ್ಕಾಂ ಅಧಿಕಾರಿಗಳ ಈ ರೈತವಿರೋಧಿ ನಿಲುವು ಖಂಡಿಸಿ, ಇದೇ 25ರಂದು ಪುನಃ ಹೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದೆಂದು ಎಂದು ಹೇಳಿಕೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

## 'ಪೊಲೀಸ್ ಹುತಾತ್ಮರ ದಿನಾಚರಣೆ' ಕಾರ್ಯಕ್ರಮದಲ್ಲಿ ಸತ್ರ ನ್ಯಾಯಾಧೀಶ ಬಸವರಾಜ

# ಪೊಲೀಸರಿಲ್ಲದ ಸಮಾಜ ಊಹಿಸಲಾಗದು

■ ವಿಜಯಸಾಕ್ಷಿ ಸುದ್ದಿ, ಗದಗ

ಸಂವಿಧಾನದ ಧ್ಯೇಯೋದ್ದೇಶ ಸರಿಯಾಗಿ ಪಾಲನೆಗೊಳ್ಳುವಲ್ಲಿ ಪೊಲೀಸ್ ಇಲಾಖೆಯ ಪಾತ್ರ ಪ್ರಮುಖವಾಗಿದೆ. ಪೊಲೀಸರ ತ್ಯಾಗ, ಬಲಿದಾನ, ಸಾಹಸ ಸ್ಮರಣೀಯವಾದುದು ಎಂದು ಜಿಲ್ಲಾ ಸತ್ರ ನ್ಯಾಯಾಧೀಶ ಬಸವರಾಜ ಅವರು ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕಚೇರಿ ಆವರಣದಲ್ಲಿ ಗದಗ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಕರ್ತವ್ಯ ಪಾಲನೆಯಲ್ಲಿ ಪ್ರಾಣಾರ್ಪಣೆ ಮಾಡಿದ ಪೊಲೀಸರ ನೆನಪಿಗಾಗಿ ಏರ್ಪಡಿಸಿದ 'ಪೊಲೀಸ್ ಹುತಾತ್ಮರ ದಿನಾಚರಣೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪೊಲೀಸ್ ಇಲಾಖೆಯ ಪ್ರತಿ ಹಂತದ ಅಧಿಕಾರಿ, ಸಿಬ್ಬಂದಿಗಳು ಹಗಲಿರುಳೆನ್ನದೇ ಕರ್ತವ್ಯ ನಿರ್ವಹಿಸುವ ಮೂಲಕ ಶಾಂತಿಯುತ ಸಮಾಜ ನಿರ್ಮಾಣಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಪೊಲೀಸ್ ಇಲಾಖೆ ಜನಸ್ನೇಹಿ ಪೊಲೀಸ್ ಆಗುವಲ್ಲಿ ದಾಪುಗಾಲಿಟ್ಟಿದೆ. ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಣಾರ್ಪಣೆ ಮಾಡಿದ ಪೊಲೀಸರ ಸ್ಮರಣೆ ಮಾಡಲು ಪೊಲೀಸ್ ಹುತಾತ್ಮ ದಿನಚರಣೆ ಹಮ್ಮಿಕೊಳ್ಳಲಾಗಿದ್ದು, ಪ್ರಾಣಾರ್ಪಣೆ ಮಾಡಿದ ಪೊಲೀಸರಿಗೆ ಗೌರವ ಸಲ್ಲಿಸೋಣ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಮಾತನಾಡಿ, ಭಾರತ-ಚೀನಾ ಗಡಿಯಲ್ಲಿ ಚೀನಾ ಸೇನೆಯಿಂದ ನಡೆದ ದಾಳಿಯಲ್ಲಿ ದೇಶದ ಹತ್ತಕ್ಕೂ ಅಧಿಕ ಪೊಲೀಸರು ಹುತಾತ್ಮರಾದರು. ಇದರ ನೆನಪಿಗಾಗಿ ಹಾಗೂ ದೇಶದ ಆಂತರಿಕ ಭದ್ರತೆಗಾಗಿ ಪೊಲೀಸ್ ಹುತಾತ್ಮ ದಿನಾಚರಣೆಯನ್ನು ಪ್ರತಿ ವರ್ಷ ಆಚರಿಸಲಾಗುತ್ತಿದೆ. 2023ರಲ್ಲಿ ದೇಶದಲ್ಲಿ ಒಟ್ಟೂ 189 ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ಹುತಾತ್ಮರಾಗಿದ್ದು, ಇದರಲ್ಲಿ ಗದಗ ಜಿಲ್ಲೆಯ ನಾಲ್ವರು ಪೊಲೀಸರು ಸೇರಿದ್ದಾರೆ ಎಂದರು.



ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಹುತಾತ್ಮ ಪೊಲೀಸರಿಗೆ ಪುಷ್ಪಗುಚ್ಛ ಅರ್ಪಿಸುವ ಮೂಲಕ ಗೌರವ ಸಮರ್ಪಿಸಿದರು. ಡಿಎಸ್‌ಪಿಗಳಾದ ಮಡಿವಾಳಪ್ಪ ಸಂಕದ, ಪ್ರಭುಗೌಡ ತೀರದಳ್ಳಿ, ತಿಮ್ಮರಾಯ ಪಾಟೀಲ, ಹುತಾತ್ಮರಿಗೆ ಪುಷ್ಪ ನಮನ ಸಲ್ಲಿಸಿದರು. ಹೋಮ್ ಗಾರ್ಡ್ ಕಮಾಂಡರ್ ವಿಶ್ವನಾಥ, ಪೊಲೀಸ್ ಇಲಾಖೆಯ ಸಹಾಯಕ ಆಡಳಿತಾಧಿಕಾರಿ ಎನ್.ಎ ಹಿಪ್ಪರಗಿ, ಪೊಲೀಸ್ ಇನ್ಸಪೆಕ್ಟರ್ ಯು.ಎನ್ ಪಾಟೀಲ, ಪಿಎಸ್‌ಐಗಳಾದ ಎನ್.ಕೆ ಚುಲಕಟ್ಟಿ, ಶ್ರೀಮತಿ ಕೋರಬಾಳ, ಆರ್‌ಎಸ್‌ಐ ಮಾರುತಿ ದಳವಾಯಿ, ಎಎಸ್‌ಐ ಎಸ್.ಪಿ ಕಡುಗಿನ, ಎಆರ್‌ಎಸ್‌ಐ ಬಿ.ಎಫ್ ಹಳ್ಳಿಗುಡಿ, ಡಿ.ಎಸ್ ಬಾರಕೇರ, ಜೆ.ಬಿ ಕೋಸಂಬನವರ, ಎಸ್.ವೈ ಗಾಣಿಗೇರ ಪುಷ್ಪನಮನ ಸಲ್ಲಿಸಿದರು.

> ಪೊಲೀಸರಿಲ್ಲದ ಸಮಾಜ ಊಹಿಸಲಾಗದು. ಸಮಾಜದಲ್ಲಿ ಶಾಂತಿ-ಸುವ್ಯವಸ್ಥೆ ಜಾರಿಗೊಳಿಸುವಲ್ಲಿ ಹಾಗೂ ವಂಚನೆ, ದರೋಡೆ, ಹಲ್ಲೆ, ಅಪರಾಧ ನಿಯಂತ್ರಣದಲ್ಲಿ ಇಲಾಖೆ ಸದಾ ಮುಂದಿದೆ. ಕರ್ನಾಟಕದ ಜನರು ನೆಮ್ಮದಿಯ ಜೀವನದೊಂದಿಗೆ ಸಹಬಾಳ್ವೆಯಿಂದ ಮುನ್ನಡೆಯಲು ಪೊಲೀಸ್ ಇಲಾಖೆ ತನ್ನದೇ ಆದ ಕೊಡುಗೆ ನೀಡಿದೆ.
>
> – ಬಸವರಾಜ.
> ಜಿಲ್ಲಾ ಸತ್ರ ನ್ಯಾಯಾಧೀಶರು.

ಜಿಲ್ಲೆಯ ಮುಂಡರಗಿ ಪೊಲೀಸ್ ಠಾಣೆಯ ನಿಂಗಪ್ಪ ಹಲವಾಗಲಿ, ಮಹೇಶ ವಸ್ತ್ರದ, ಕೊಟ್ರಪ್ಪ ಬಂಡಗಾರ, ಬೆಟಗೇರಿ ಬಡಾವಣೆ ಪೊಲೀಸ್ ಠಾಣ್ಯ ಬಸವರಾಜ ಗುಡ್ಡದ ಅವರುಗಳು ಕರ್ತವ್ಯ ಪಾಲನೆಯಲ್ಲಿ ಪ್ರಾಣಾರ್ಪಣೆ ಮಾಡಿದ್ದಾರೆ ಎಂದು ಅವರುಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾದಿಕಾರಿ ಬಿ.ಎಸ್ ನೇಮಗೌಡ ಈ ಸಂದರ್ಭದಲ್ಲಿ ಸ್ಮರಿಸಿದರು.

ನಿವೃತ್ತ ಪೊಲೀಸ್ ಅಧಿಕಾರಿಗಳ ಪರವಾಗಿ ನಿವೃತ್ತ ಆರ್‌ಎಸ್‌ಐ ಎ.ಬಿ ಬಸನಗೌಡ, ಮಾಧ್ಯಮದ ಪರವಾಗಿ ವಾರ್ತಾಧಿಕಾರಿ ವಸಂತ ಮಡ್ಲೂರ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ರಾಜು ಹೆಬ್ಬಳ್ಳಿ, ಛಾಯಾಗ್ರಾಹಕ ರಾಮು ವಗ್ಗಿ ಗೌರವ ಸಮರ್ಪಿಸಿದರು.

ಸಂಘ ಸಂಸ್ಥೆಗಳ ಸಮುದಾಯಗಳ ಪರವಾಗಿ ಎಸ್.ಎನ್ ಬಳ್ಳಾರಿ, ಚೇಂಬರ್ ಆಫ್ ಕಾಮರ್ಸ್ ಪರವಾಗಿ ಮುನವಳ್ಳಿ, ಬೀದಿ ಬದಿ ವ್ಯಾಪಾರಸ್ಥರ ಪರವಾಗಿ ಬಾಷಾಸಾಬ ಮಲ್ಲಸಮುದ್ರ, ನಿವೃತ್ತ ಸೈನಿಕರ ಪರವಾಗಿ ಬೆಟ್ಟಪ್ಪ ಕಂಬಾರ, ರೈತ ಸಂಘಟನೆಗಳ ಪರವಾಗಿ ವಿಜಯಕುಮಾರ ಸಂಕದ, ಅಕ್ಬರಸಾಬ ಹಾಗೂ ಜಿಲ್ಲೆಯ ಹುತಾತ್ಮ ಪೊಲೀಸರ ಕುಟುಂಬಸ್ಥರು ಹುತಾತ್ಮ ಪೊಲೀಸರಿಗೆ ಪುಷ್ಪಗುಚ್ಛ ಅರ್ಪಿಸಿ ಗೌರವ ಸಲ್ಲಿಸಿದರು.

ಪರೇಡ್ ಕಮಾಂಡರ್ ಶಂಕರಗೌಡ ಚೌಧರಿ ಅವರು ಶಿಸ್ತುಬದ್ಧ ಪೊಲೀಸ್ ಪರೇಡ್ ನಡೆಸಿಕೊಟ್ಟರು. ಎನ್.ಪಿ ಭಟ್ ಕಾರ್ಯಕ್ರಮ ನಿರ್ವಹಿಸಿದರು.

## ಸುಗಮ ಸಂಚಾರ ವ್ಯವಸ್ಥೆಗೆ ಥರ್ಡ್-ಐ: ಸಚಿವ ಪಾಟೀಲ

# ಅಪರಾಧ ಚಟುವಟಿಕೆಗಳ ಮೇಲೆ ಕಣ್ಗಾವಲು

■ ವಿಜಯಸಾಕ್ಷಿ ಸುದ್ದಿ, ಗದಗ

ಯುವಜನತೆಯನ್ನು ಮಾದಕ ವಸ್ತುಗಳ ಸಹವಾಸದಿಂದ ತಡೆಯುವ ಮೂಲಕ ಆರೋಗ್ಯಯುತ ಜೀವನ ನಡೆಸುವಂತಾಗಲು, ಆ ಮೂಲಕ ವ್ಯಸನಮುಕ್ತ ಹಾಗೂ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ನಾವೆಲ್ಲ ಶ್ರಮಿಸಬೇಕಾದ ಅನಿವಾರ್ಯತೆ ಇದೆ ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ. ಪಾಟೀಲ ಅಭಿಪ್ರಾಯಪಟ್ಟರು.

ಶನಿವಾರ ಗದಗ ನಗರದ ಭಾರತರತ್ನ ಪಂಡಿತ ಭೀಮಸೇನ ಜೋಶಿ ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಹಮ್ಮಿಕೊಂಡಿದ್ದ ಥರ್ಡ ಐ ಕಮಾಂಡ ಸೆಂಟರ್‌ಹಾಗೂ ಮಾದಕ ವ್ಯಸನಮುಕ್ತ ಗದಗ ಜಿಲ್ಲೆ ಜಾಗೃತಿ ಅಭಿಯಾನ ವೇದಿಕೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾವೆಲ್ಲ ಇಂದು ಗಾಂಧೀ ವೃತ್ತದಿಂದ ಕಾಲ್ನಡಿಗೆ ಮೂಲಕ ಉತ್ಸಾಹದಿಂದ ನಡೆದು ಬಂದಿರುವುದು ಮಾದಕ ವ್ಯಸನಮುಕ್ತ ಜಿಲ್ಲೆಯನ್ನು ಕಟ್ಟುವ ಸ್ಫೂರ್ತಿ ನೀಡಲು. ಬಿರುಬಿಸಿಲು ಲೆಕ್ಕಿಸದೆ, ಶಾಲಾ ಮಕ್ಕಳು, ವಿವಿಧ ಸಂಘಟನೆಗಳ ಸ್ವಯಂ ಸೇವಕರು, ಸ್ವಯಂ ಪ್ರೇರೇತವಾಗಿ ಜಾಥಾದಲ್ಲಿ ಪಾಲ್ಗೊಳ್ಳುವ ಮೂಲಕ ವ್ಯಸನಮುಕ್ತ ಜಿಲ್ಲೆಗೆ ಮುಂದಾಗಿರುವುದು ಅತ್ಯಂತ ಸಂತಸ ತಂದಿದೆ ಎಂದರು.

ಯುವಜನತೆ ಮಾದಕ ವ್ಯಸನಕ್ಕೆ ಅಂಟಿಕೊಳ್ಳದೇ ದೈನಂದಿನ ಜೀವನವನ್ನು ಆಟೋಟಗಳ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ದೈಹಿಕ ಸದೃಢತೆ ಹೊಂದಬೇಕು. ಆ ಮೂಲಕ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ನಾವೆಲ್ಲ ಕಾರಣೀಭೂತರಾಗಬೇಕಿದೆ.

ಆರೋಗ್ಯ ಹಾಗೂ ಸ್ವಾಸ್ಥ್ಯ ಸಮಾಜ ನಿರ್ಮಾಣ ವಾಗಬೇಕಾದರೆ, ನಾವು ಮಾದಕ ದ್ರವ್ಯಗಳ ಸಹವಾಸದಿಂದಅಂತರ ಕಾಯ್ದುಕೊಳ್ಳಬೇಕಿದೆ ಎಂದು ಸಚಿವ ಪಾಟೀಲ ಕರೆ ನೀಡಿದರು.



ಕಾನೂನು ಸುವ್ಯವಸ್ಥೆ ಹಾಗೂ ಅಪರಾಧ ನಿಯಂತ್ರಣಕ್ಕಾಗಿ, ಸಂಚಾರಿ ನಿಯಮಗಳ ಪರಿಪಾಲನೆ ಮಾಡಬೇಕು.ಹೀಗಾಗಿ, ನಗರದಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಥರ್ಡ ಐ ಕಮಾಂಡ ಸೆಂಟರ್ ಆರಂಭಿಸಲಾಗಿದೆ. ನಗರಕ್ಕೆ ಪ್ರವೇಶಿಸುವ ಹಾಗೂ ನಿರ್ಗಮಿಸುವ ಪ್ರತಿ ಮಾರ್ಗದಲ್ಲಿಯೂ ಅತ್ಯಾಧುನಿಕ ತಂತ್ರಜ್ಞಾನದ ಸಿಸಿಟಿವಿ ಅಳವಡಿಸಲಾಗಿದೆ. ಅಲ್ಲದೇ ಪ್ರಮುಖ ವೃತ್ತಗಳ ಸಾರ್ವಜನಿಕ ಸ್ಥಳಗಳಲ್ಲಿ ಸಿಸಿಟಿವಿ ಅಳವಡಿಸುವ ಮೂಲಕ ಸಂಚಾರ ನಿಯಮಗಳ ಪಾಲನೆಗೆ ಕ್ರಮವಹಿಸಲಾಗಿದೆ.ಇದರಿಂದಾಗಿ ನಿಯಮ ಪರಿಪಾಲನೆ ಹಾಗೂ ಅಪರಾಧ ಚಟುವಟಿಕೆ, ಕಳವು, ಅನೈತಿಕ ಚಟುವಟಿಕೆಗಳ ನಿಯಂತ್ರಣ ಸಾಧ್ಯವಾಗಲಿದೆ ಎಂದರು.

ಮುಂದಿನ ದಿನಗಳಲ್ಲಿ ಸಂಚಾರಿ ನಿಯಮಗಳನ್ನು ಪ್ರತಿಯೊಬ್ಬರು ಪರಿಪಾಲಿಸುವ ಮೂಲಕ ಸಂಭವನೀಯ ಅಪಘಾತಗಳನ್ನು ತಡೆಗಟ್ಟಲು ಸಹಕರಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಮಾತನಾಡಿ, ಥರ್ಡ ಐ ಕಮಾಂಡ ಸೆಂಟರ್ ಪರಿಕಲ್ಪನೆಯನ್ನು ಮೊದಲ ಬಾರಿಗೆ ನೀಡಿದವರು ಸಚಿವಎಚ್.ಕೆ.ಪಾಟೀಲ ಅವರು. ಅದನ್ನುಅವರ ಮಾರ್ಗದರ್ಶನದಂತೆ ಅನುಷ್ಠಾನ ಗೊಳಿಸಲಾಗಿದೆ. ಜತೆಗೆ, ಗೃಹ ಸಚಿವರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಾದಕ ವ್ಯಸನಮುಕ್ತ ಜಿಲ್ಲೆಯನ್ನಾಗಿ ರೂಪಿಸಲು ಒಪ್ಪಿಗೆ ನೀಡಿದ್ದು, ಸಾರ್ವಜನಿಕರು ಈ ನಿಟ್ಟಿನಲ್ಲಿ ಸಹಕರಿಸುವ ಮೂಲಕ ಇಲಾಖೆಯೊಂದಿಗೆ ಕೈಜೋಡಿಸುವಂತೆ ಅವರು ಮನವಿ ಮಾಡಿದರು.

ವೇದಿಕೆಯಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಮುಖಂಡರಾದ ಸಿದ್ದು ಪಾಟೀಲ, ಪ್ರಭು ಬುರಬುರೆ, ಲಡ್ಡು ಮುತ್ಯಾ, ಮಾಜಿ ಸೈನಿಕರ ಸಂಘದಅಧ್ಯಕ್ಷ ಬಸವಲಿಂಗಪ್ಪ ಮುಂಡರಗಿ, ದಸರಾ ಕ್ರೀಡಾಕೂಟದಲ್ಲಿ ಪದಕ ಪಡೆದ ಕ್ರೀಡಾಪಟು ಸಮನ್ವಿತಾ ಮಠದಾಪುರ ಇತರರು ಉಪಸ್ಥಿತರಿದ್ದರು.

ಡಿವೈಎಸ್‌ಪಿ ಪ್ರಭುಗೌಡ ಸ್ವಾಗತಿಸಿದರು. ಬಾಹುಬಲಿ ಜೈನರ ಕಾರ್ಯಕ್ರಮ ನಿರೂಪಿಸಿದರು.

ಈ ಸಂದರ್ಭದಲ್ಲಿ ಮೈಸೂರಿನಲ್ಲಿ ನಡೆದ ದಸರಾ ಕ್ರೀಡಾಕೂಟದಲ್ಲಿ ಸಾಧನೆಗೈದ ಕ್ರೀಡಾಪಟುಗಳನ್ನು ಸಚಿವರು ಸತ್ಕರಿಸಿ, ಗೌರವಿಸಿದರು. ಸ್ಥಳೀಯ ನಟರಂಗ ಕಲಾ ಸಂಸ್ಥೆ ಕಲಾವಿದರು ವ್ಯಸನಮುಕ್ತ ಸಮಾಜ ನಾಟಕ ಪ್ರಸ್ತುತಿ ಪಡಿಸಿದರು.

## ಪತ್ರಿಕಾಗೋಷ್ಠಿಯಲ್ಲಿ ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನದ ಅಧ್ಯಕ್ಷ ಶಿವಪ್ರಕಾಶ ಮಾಹಿತಿ

# ತೆರೆಮರೆಯ ಸೇವಕರಿಗೆ ಗೌರವ ಸಮರ್ಪಣೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನೂರಾರು ವರ್ಷಗಳ ಇತಿಹಾಸ ಹೊಂದಿರುವ ಪಟ್ಟಣದ ಲಿಂಬಯ್ಯಸ್ವಾಮಿಮಠದಲ್ಲಿ ವಿಜಯ ದಶಮಿಯಂದು, ಸೋಮವಾರ ಸಂಜೆ 7ಕ್ಕೆ ಸಾಂಪ್ರದಾಯಿಕ ನಂದಾ ದೀಪಾರಾಧನಾ ಕಾರ್ಯಕ್ರಮ ಶ್ರೀಮಠದ ಆವರಣದಲ್ಲಿ ನಡೆಯಲಿದೆ ಎಂದು ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನದ ಅಧ್ಯಕ್ಷ ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ ಹೇಳಿದರು.

ಈ ಕುರಿತು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಶ್ರೀಮಠವು ಪ್ರತಿವರ್ಷ ಯುಗಾದಿ ಮತ್ತು ನವರಾತ್ರಿ ಸಂದರ್ಭದಲ್ಲಿ ಸಾಂಪ್ರದಾಯಿಕ, ಧಾರ್ಮಿಕ, ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಶ್ರೀಮಠದ ಹಿರಿಯರಾದ ಲಿಂ. ಎಲ್.ಸಿ ಲಿಂಬಯ್ಯ ಸ್ವಾಮಿಮಠ, ಲಿಂ.ಶರಣಯ್ಯನವರು ಲಿಂಬಯ್ಯ ಸ್ವಾಮಿಮಠ ಅವರು ಹಾಕಿಕೊಟ್ಟ ಮಾರ್ಗದಂತೆ ಪ್ರತಿವರ್ಷ ವಿಶೇಷ, ಅರ್ಥಪೂರ್ಣ ಕಾರ್ಯಕ್ರಮ ರೂಪಿಸುತ್ತಿದ್ದೇವೆ. ಸಮಾಜದಲ್ಲಿ ತೆರೆಮರೆಯಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಮಹನೀಯರನ್ನು ಗುರುತಿಸಿ ಗೌರವಿಸುವ ಕಾರ್ಯ ಮಾಡಲಾಗುತ್ತಿದೆ.

> ಈ ಬಾರಿ, ಸಂಘ ಜೀವಿಯಾಗಿ ಸದ್ದಿಲ್ಲದ ಸೇವೆ ಸಲ್ಲಿಸುತ್ತಿರುವ ಕಾಯಕಜೀವಿ ಗೌರಮ್ಮ ಯಳಮಲಿ, ವಿಜಯಕುಮಾರ ನಿಂಗಪ್ಪ ಹಾಲಿ ಹಾಗೂ ಬಡವರ, ನಿರ್ಗತಿಕರಿಗೆ ಅನ್ನದ ಸೇವೆ ಸಲ್ಲಿಸುತ್ತಿರುವ ಕರಿಯಪ್ಪ ನೀಲಪ್ಪ ಶಿರಹಟ್ಟಿ ಇವರುಗಳನ್ನು ಅವಿಷ್ಕಾರಗೊಂಡ ಸುಪ್ತ ಚೇತನಗಳು ಎಂದು ಗುರುತಿಸಿ ಶ್ರೀಮಠದಿಂದ ಗೌರವಿಸಲಾಗುವದು ಎಂದು ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ ಹೇಳಿದರು.

ಧರ್ಮದರ್ಶಿ ಕೃಷ್ಣ ಕುಲಕರ್ಣಿ ಮಾತನಾಡಿ, ಭವ್ಯ ಪರಂಪರೆಯ ಈ ನಮ್ಮ ಭಾಗದ ಹೆಮ್ಮೆಯ ಲಿಂಬಯ್ಯಸ್ವಾಮಿಮಠಕ್ಕೆ ತನ್ನದೇ ಆದ ಇತಿಹಾಸವಿದೆ. ನವರಾತಿ ನಿಮಿತ್ತ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವ ಹೂವಿನಶಿಗ್ಲಿ ವಿರಕ್ತಮಠದ ಶ್ರೀ ಮ.ನಿ.ಪ್ರ. ಚನ್ನವೀರ ಮಹಾಸ್ವಾಮಿಗಳು ಆಶೀರ್ವಚನ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಪುರಸಭೆ ಕಲಾ ಮಹಾವಿದ್ಯಾಲಯ ಪ್ರಾಚಾರ್ಯ ಭೀಮಸೇನ ಉಗ್ರದ ಉಪನ್ಯಾಸ ನೀಡಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪುರಸಭೆ ಮಾಜಿ ಅಧ್ಯಕ್ಷ ವಿ.ಜಿ ಪಡಗೇರಿ, ಚಿದಾನಂದ ಲಿಂಬಯ್ಯಸ್ವಾಮಿಮಠ, ಈರಣ್ಣ ಅಂಕಲಕೋಟಿ, ಬಸಣ್ಣ ಗಾಂಜಿ, ಶೇಖರಗೌಡ್ರು ಪಾಟೀಲ, ಶಾಂತರಾಜ ಓದುನವರ, ಮಹೇಶ ಲಿಂಬಯ್ಯಸ್ವಾಮಿಮಠ, ಸಾಹೇಬಜಾನಸಾಬ ಹವಾಲ್ದಾರ, ರಾಮಣ್ಣ ಪಡಗೇರಿ, ನಿಂಗಪ್ಪ ಬನ್ನಿ, ಗಂಗಪ್ಪ ದುರಗಣ್ಣವರ, ನೀಲಪ್ಪ ಪೂಜಾರ, ಶರಣಪ್ಪ ಗುಳಗಣ್ಣವರ ಹಲವರಿದ್ದರು.

## 'ನಮ್ಮೂರ ದಸರಾ ದರ್ಬಾರ್' ಕಾರ್ಯಕ್ರಮದಲ್ಲಿ ಸಚಿವ ಡಾ. ಎಚ್.ಕೆ ಪಾಟೀಲ ಭರವಸೆ

# ಶ್ರೀ ಸಹಸ್ರಾರ್ಜುನ ಭವನ ನಿರ್ಮಾಣಕ್ಕೆ ಸಹಕಾರ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಎಸ್‌ಎಸ್‌ಕೆ ಸಮಾಜದ ವತಿಯಿಂದ ಸಹಸ್ರಾರ್ಜುನ ಭವನ ನಿರ್ಮಾಣ ಆಗಬೇಕಿದೆ. ಈ ಬಗ್ಗೆ ಸಮಾಜದ ಹಿರಿಯರು, ಯುವಕರು ಶೀಘ್ರವೇ ಭವನ ನಿರ್ಮಾಣಕ್ಕೆ ಚಾಲನೆ ದೊರಕಿಸುವ ಕೆಲಸ ಮಾಡಬೇಕು, ನಾನೂ ಕೂಡಾ ಪ್ರಾಮಾಣಿಕ ಪ್ರಯುತ್ನ ಮಾಡುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಭರವಸೆ ನೀಡಿದರು.

ನಗರದ ಹಳೇ ಸರಾಫ ಬಜಾರದ ಶ್ರೀ ಜಗದಂಬಾ ದೇವಸ್ಥಾನದ ಶ್ರೀ ಸಹಸ್ರಾರ್ಜುನ ಸಮುದಾಯ ಭವನದ ಬಾಸ್ಕರಸಾ ಪವಾರ ಸಭಾಂಗಣದಲ್ಲಿ 'ನಮ್ಮೂರ ದಸರಾ ದರ್ಬಾರ್' ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಎಸ್‌ಎಸ್‌ಕೆ ಸಮಾಜದಲ್ಲಿ ಮನೆ ಇಲ್ಲದವರನ್ನು ಗುರುತಿಸಿ, ಸಮಾಜದ ಹಿರಿಯರು ಪಟ್ಟಿ ಮಾಡಿ ನೀಡಿದರೆ ಅವರಿಗೆ ಮುಂದಿನ ದಿನಗಳಲ್ಲಿ ಮನೆಗಳನ್ನು ನೀಡಲಾಗುವುದು



ಎಂದು ಸಚಿವ ಎಚ್.ಕೆ ಪಾಟೀಲ ಅವರು ಹೇಳಿದರು.

ಈ ಕಾರ್ಯಕ್ರಮದಲ್ಲಿ ವಿನೋದ ಶಿದ್ಲಿಂಗ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಫಕೀರಸಾ ಬಾಂಡಗೆ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಮಾಜಿ ಶಾಸಕ ಡಿ.ಆರ್ ಪಾಟೀಲ, ಯುವ ಮುಖಂಡ ಕೃಷ್ಣಗೌಡ ಪಾಟೀಲ, ಎಸ್‌ಎಸ್‌ಕೆ ಸಮಾಜದ ಉಪಾಧ್ಯಕ್ಷ ರಾಜು ಬದಿ, ಕಾರ್ಯದರ್ಶಿ ರವಿ ಶಿದ್ಲಿಂಗ, ದಸರಾ ಕಮಿಟಿ ಚೇರಮನ್ ವಿನೋದ ಬಾಂಡಗೆ, ವೈಯಿಸ್ ಚೇರಮನ್ ವಿಷ್ಣುಸಾ ಶಿದ್ಲಿಂಗ ಉಪಸ್ಥಿತರಿದ್ದರು.

> ಎಸ್‌ಎಸ್‌ಕೆ ಸಮಾಜ ಹಾಗೂ ನಮ್ಮ ಕುಟುಂಬದೊಂದಿಗೆ ಉತ್ತಮ ಬಾಂಧವ್ಯವಿದೆ. ಈಗಲೂ ನಮ್ಮನ್ನು ಕೆ.ಎಚ್ ಪಾಟೀಲ ಅವರ ಮಗ ಬಂದಿದ್ದಾರೆ ಹಾಗೂ ನನ್ನ ಮಗನನ್ನೂ ಮೊಮ್ಮಗ ಬಂದಿದ್ದಾರೆ ಎಂದು ಆತ್ಮೀಯತೆಯಿಂದ ಕರೆಯುತ್ತಾರೆ ಎಂದು ಹಳೆಯ ನೆನೆಪುಗಳನ್ನು ಮೆಲಕು ಹಾಕಿದ ಸಚಿವ ಎಚ್.ಕೆ ಪಾಟೀಲ, ಎಸ್‌ಎಸ್‌ಕೆ ಸಮಾಜದ ಅಭಿಮಾನಕ್ಕೆ ನಾನು ಸದಾ ಚಿರಋಣಿಯಾಗಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಎಸ್‌ಎಸ್‌ಕೆ ಸಮಾಜದ ಪಂಚ ಕಮಿಟಿಯ ಸದಸ್ಯರಾದ ವಿಶ್ವನಾಥಸಾ ಖಟವಟೆ, ಸುರೇಶಕುಮಾರ ಬದಿ, ಬಲರಾಮ ಬಸವಾ, ಎನ್.ಆರ್ ಖಟವಟೆ, ಗಂಗಾಧರ ಹಬೀಬ, ಮೋತಿಲಾಲಸಾ ಪೂಜಾರಿ, ಮಾರುತಿ ಪವಾರ, ಪರಶುರಾಮಸಾ ಬದಿ, ಗಣಪತಸಾ ಜೀತೂರಿ, ಅಂಬಾಸಾ ಖಟವಟೆ, ಬಿ.ಬಿ ಅಸೂಟಿ, ಗುರಣ್ಣ ಬಳಗಾನೂರ, ಕ್ಯಾಪ್ಟನ್ ಶರ್ಮಾ, ಅಶೋಕ ಮಂದಾಲಿ, ಉದ್ಯಮಿಗಳಾದ ರಘುನಾಥಸಾ ಹಬೀಬ, ಎಸ್.ಡಿ ಪವಾರ, ಬುಡ್ಡಣ್ಣ ಹಬೀಬ, ಹಿರಿಯರಾದ ಪ್ರಭು ಬುರುಬುರೆ, ಡಾ. ಆರ್. ಎಚ್ ಕಬಾಡಿ, ಪ್ರಕಾಶ ಬಾಕಳೆ, ವಿಶ್ವನಾಥ ಸೂಳಂಕಿ, ಮಾಧು ಬದಿ, ನಾಗರಾಜ ಖೋಡೆ, ಶ್ರೀಕಾಂತ ಬಾಕಳೆ, ಗೋಪಾಲ ನಾಕೋಡ್, ಸುಧೀರ ಕಾಟಿಗರ, ಕಿಶನ್ ಮೇರವಾಡೆ, ಶ್ರೀಕಾಂತ ಅರಸಿದ್ಧಿ, ರಾಮಚಂದ್ರ ಶಿದ್ಲಿಂಗ, ಜಗದೀಶ ಪವಾರ, ಚಂದನ ಖಟವಟೆ, ರೇಖಾ ಖಟವಟೆ, ರೇಣುಕಾ ಕಲಬುರ್ಗಿ, ಶಾಂತಾಬಾಯಿ ಬಾಕಳೆ, ಅಂಬಿಕಾ ಬಾಂಡಗೆ ಮುಂತಾದವರು ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಜಿ.ಎನ್ ಹಬೀಬ ನಿರೂಪಿಸಿದರು. ಅನಿಲ್ ಖಟವಟೆ ವಂದಿಸಿದರು.

# ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟ ಅ.27ರಿಂದ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಅ.27ರಿಂದ ಅ.29ರವರೆಗೆ ತುಮಕೂರಿನ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಜರುಗಲಿವೆ.

ಅ.27ರಂದು ಸಂಜೆ 4.30ಕ್ಕೆ ಸಿಎಂ ಸಿದ್ದರಾಮಯ್ಯನವರು ಕ್ರೀಡಾಕೂಟಕ್ಕೆ ಚಾಲನೆ ನೀಡುವರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಗೃಹ ಹಾಗೂ ತುಮಕೂರ ಜಿಲ್ಲಾ ಉಸುವಾರಿ ಸಚಿವ ಡಾ. ಜಿ.ಪರಮೇಶ್ವರ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ.ನಾಗೇಂದ್ರ, ಸಹಕಾರ ಸಚಿವ ಕೆ.ಎನ್ ರಾಜಣ್ಣ, ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಕ್ಷರಿ ಹಾಗೂ ಸಚಿವ ಸಂಪುಟದ ಇತರೆ ಸಚಿವರು, ಸಂಸದರು, ಶಾಸಕರು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುವ ರಾಜ್ಯದ ಸುಮಾರು 10 ಸಾವಿರಕ್ಕೂ ಹೆಚ್ಚಿನ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಮುಂಡರಗಿ ತಾಲೂಕಿನಿಂದ 50ಕ್ಕೂ ಹೆಚ್ಚು ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿ ಆನ್‌ಲೈನ್‌ನಲ್ಲಿ ನೊಂದಾಯಿಕೊಂಡಿರುವ ಎಲ್ಲಾ ಕ್ರೀಡಾಪಟುಗಳಿಗೆ ಗುಣಮಟ್ಟದ ಟ್ರ್ಯಾಕ್ ಪಾಂಟ್ ಹಾಗೂ ಟಿ-ಶರ್ಟ ಮತ್ತು ಕ್ಯಾಪ್ ವಿತರಿಸಲಾಗುವದು.

ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾಗುವ ಕ್ರೀಡಾಪಟುಗಳಿಗೆ ಪ್ರಶಸ್ತಿ ಪತ್ರ ಹಾಗೂ ಟ್ರೋಫಿ ನೀಡಲಾಗುವದು. ಅ.27ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4ರವರೆಗೆ ಕ್ರೀಡಾಪಟುಗಳ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.

ಅ.27ರಂದು ಸಂಜೆ 5 ಗಂಟೆಗೆ ಜಿಲ್ಲಾವಾರು ಪಥಸಂಚಲನ ಹಾಗೂ ಮುಖ್ಯಮಂತ್ರಿಗಳಿಂದ ಗೌರವ ವಂದನೆ ಸ್ವೀಕಾರದ ನಂತರ ಮುಖ್ಯಮಂತ್ರಿಗಳಿಂದ ಉದ್ಘಾಟನೆ ನೆರವೇರಲಿದೆ ಎಂದು ನಾಗರಾಜ ಹಳ್ಳಿಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka